ಕೊರವಂಜಿ



KURAVAN[JI]
Kannada Month[ly]

★

ಸಂಪಾದಕರು:

ಶ್ರೀ ರಾ. ಶಿ.

★

ಚಿತ್ರಗಾರರು

ಶ್ರೀ [illegible]

ಶ್ರೀ [illegible]

ಶ್ರೀ [illegible]

ಶ್ರೀ [illegible]

ಶ್ರೀ [illegible]

ಶ್ರೀ [illegible]

[illegible]

[illegible]

ಡಿಸೆಂಬರ್

೧೯೬೪

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.

ಕೊರವಂಜಿ

ಸಂಪುಟ ೨೩] ಡಿಸೆಂಬರ್ ೧೯೬೪ [ಸಂಚಿಕೆ ೯

ಕುಹಕಿಡಿಗಳು

ಹಿಂದೊಮ್ಮೆ ನಾಗಾಲ್ಯಾಂಡಿಗೆ ಹೋಗಿ ಶಾಂತಿಯನ್ನು ಸಾಧಿಸಲು ವೃಕೋದರನು ನಾಗಕುಮಾರಿ ಹಿಡಿಂಬೆಯನ್ನು ಮದುವೆಯಾದನಂತೆ ; ಮಹಾಭಾರತದ ಪ್ರಕಾರ.

—ಅಂದರೆ ಜಯಪ್ರಕಾಶರು ಅಲ್ಲಿನ ಹೆಣ್ಣನ್ನು ಮದುವೆಯಾಗಲಿ, ಆಮೇಲೆ ತೆಪ್ಪಗಾಗುತ್ತಾರೆ ಅಂತಲೇ ?

* * * *

ನಾಗಾಲ್ಯಾಂಡಿನಲ್ಲಿ ಕೆಲವು ವರ್ಷಗಳ ಹಿಂದೆ ಟೆಲಿಫೋನ್‌ಗಳನ್ನು ಹಾಕಲಾಯಿತಂತೆ.

—ಅಂದಿನಿಂದಲೇ ಅಲ್ಲಿ ಜಗಳ ಶುರುವಾಗಿರುವುದು ಗಮನೀಯ !

* * * * *

ಕೆಟ್ಟ ಕೆಟ್ಟ ಮಾತುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಆಡಬಾರದು ಎಂದು ಕಾನೂನು ಮಾಡುತ್ತಾರಂತೆ.

—ಕಾನೂನು ಮಾಡುವಾಗ " ಆಣಿ ಮುತ್ತುಗಳು " ಹೊರಬೀಳಬಹುದು.

* * * *

ಮೃಗಾಲಯದಲ್ಲಿದ್ದ ಗಡವ ಕೋತಿಗೆ ಒಂದು ಲಾಡು ಉಂಡೆ ಎಸೆದರೆ, ಅದು ಉಂಡೆಯಲ್ಲಿದ್ದ ದ್ರಾಕ್ಷಿ ಗೋಡಂಬೀನ ತೆಗೆದುಕೊಂಡು ಮಿಕ್ಕಿದ್ದನ್ನು ನಮ್ಮ ಕಡೆಗೆ ಎಸೆದುಬಿಡೋದೇ ?

—ಜಾಣ ಗಡವ, ಡಾಲ್ಡಾದಲ್ಲಿ ಮಾಡಿ ಬೀಗರು ಬಾಗಿನ ಕೊಟ್ಟ ಲಾಡು ಅಂತ ಅದು ಹೇಗೆ ತಿಳಿದುಕೊಂಡಿತು ?

ಗೋವಾ ಅರಿಯದ ಬಾಲೆ ಇದ್ದಹಾಗೆ. ತುಂಬಿಕೊಂಡು ಬೆಳೆಯಲಿ. ಆಮೇಲೆ ವರನನ್ನು ಆರಿಸಿಕೊಳ್ಳಲಿ ಎಂದು ನಮ್ಮ ಮುಖ್ಯ ಮಂತ್ರಿಗಳು.

—ತುಂಬಿಕೊಂಡು ಬೆಳದಮೇಲೆ ಹಿಡಿಯಕ್ಕೆ ಆಗುತ್ತ್ಯೇ ಹುಡುಗಿಯರನ್ನು ಮದುವೇನೇ ಬೇಡ ಕೂಡುವಳಿಯೇ ಸಾಕು ಅನ್ನಬಹುದು.

* * * *

ಸರ್ಕಾರಕ್ಕೆ ಶಾಯಿ ಸರಬರಾಜು ಮಾಡ್ತಾ ಇದ್ದ ಜಾಣ ಈಗ

—ಹಾಲಿನ ಕೇಂದ್ರವನ್ನು ಆರಂಭಿಸಿದ್ದಾನಂತೆ.

* * * *

ಮದುವೆಯಾಗದೆ ಇರುವ ಹೆಂಗಸರಿಗೆ ಕತೆ ಕಾದಂಬರಿಗಳಲ್ಲಿ ಹೆಚ್ಚು ಆಸಕ್ತಿಯಂತೆ.

—ಮದುವೆಯಾದಮೇಲೆ ಗಂಡನಿಗೆ ಕತೆ ಕಟ್ಟಿ ಹೇಳೋದೇ ಸಾಕಾಗಿ ಹೋಗುತ್ತೆ, ಅಲ್ಲವೇ ? ಓದಕ್ಕೆಲ್ಲಿ ಅವಕಾಶ.

* * * *

ಬರೋಡಾದ ಯುವಕ ಜೋಷಿ, ಬ್ರಾಡ್ಮನ್ನರಿತ್ತ ಪ್ರಶ್ನೆಯೊಂದನ್ನು ಯಶಸ್ವಿಯಾಗಿ ಉತ್ತರಿಸಿ, ಪ್ರಪಂಚದಲ್ಲೇ ಮೊದಲಿಗನಾಗಿದ್ದಾನಂತೆ.

—ಅಂದಮೇಲೆ ಆಕಾಶವಾಣಿಯ ಕ್ರಿಕೆಟ್ ಕಾಮೆಂಟೇಟರ್ ಆಗುವ ದಿವ್ಯ ಭವಿಷ್ಯ ಕಾದೆ ಇದೆ !

* * * *

ರಂಗನಾಥಸ್ವಾಮಿಯ ಗರ್ಭಗುಡಿಗೆ ಇಬ್ಬರು ಯೂರೋಪಿಯನ್ ಪ್ರವಾಸಿಗರನ್ನು ಬಿಡಲಿಲ್ಲವಂತೆ.

—ತಿರುಗ ಮುರುಗ ಅಪರ್ಥೈಟ್ !!

* * * *

ಅಗಸನಿಗೆ ಹಾಕಿದ ಕೊಳೆ ಅಂಗಿಯಲ್ಲಿ ನೂರು ರೂಪಾಯಿಗಳ ನೂರು ನೋಟುಗಳಿದ್ದುವಂತೆ.

—ನೂರು ರೂಪಾಯಿ ನೋಟುಗಳಮೇಲೆ ಅಷ್ಟು ಅಲಕ್ಷ್ಯ ಇರಬೇಕಾದರೆ, ಮಂತ್ರಿಗಳ ಅಳಿಯ ಅಥವಾ ಭಾವಮೈದುನನ ಅಂಗಿಯೇ ಆಗಿರಬೇಕು.

ಶಿಸ್ತಿನ ಶಿಂಗಮ್ಮ

★

"...ಲ್ರೀ..,ಪದ್ದು ಪುಟ್ಟು ವೇಣಿ ಎಷ್ಟ್ರೀ ಅದು ಅನ್ನ ಚೆಲ್ಲಿರೋದು ತಟ್ಟೆ ಸುತ್ತ ಎಲ್ಲ ಅನ್ನ ಚೆಲ್ಲದ ಹಾಗೆ ಊಟಮಾಡಬೇಕು ಅಂತ ಎಷ್ಟುಸಲ ಬಡಕೋಬೇಕ್ರಿ ನಿಮಗೆ ? ಶುದ್ಧ ತಿಳಿಗೇಡಿ ಮಕ್ಕಳಪ್ಪ "ಅಂತ" ತರಾಟಿಗೆ ತೆಗೆದುಕೊಂಡರು ನಮ್ಮನ್ನೆಲ್ಲ ಅಮ್ಮ. ನಾಳೆ ಶಿಂಗಮ್ಮನೋರ ಮನೆಗೆ ಊಟಕ್ಕೆ ಕರೆದಿದಾರಲ್ಲ ಅಲ್ಲಿ ಅವರು ಮಕ್ಕಳು ನಡಕೊಳ್ಳೋ ರೀತಿನಾದರೂ ಕಂಡು ಕಲೀರಿ ಆ ಮಕ್ಕಳ ಶಿಸ್ತೆಂದರೆ ಶಿಸ್ತು" ಎಂದೆಲ್ಲ ಹೇಳಿದರು.

"ಅದಕ್ಕೇ ಅಲ್ವೇನಮ್ಮ ಅವರನ್ನ ಶಿಸ್ತಿನ ಶಿಂಗಮ್ಮ ಅಂತ ಕರೆಯೋದು" ಎಂದು ನಡುವೆ ಬಾಯಿಹಾಕಿದಳು ಪದ್ದಿ.

ಹಾಗಂದದ್ದಕ್ಕೆ ಅವಳ ಬೆನ್ನಿಗೊಂದು ಕಡುಬು ಬಿತ್ತು. ಯಾಕೋ ಬಹಳ ಉದ್ದವಾಯಿತು ಕಣೆ ನಿನ್ನ ನಾಲಗೆ: ಮದುವೆಯಾಗಿ ಹೋಗುವ ಹುಡುಗಿಯಲ್ಲ ಅಂತ ಕಾಣುತ್ತೆ" ಅಂತ ಬೇರೆ ಗದರಿಸಿದರು.

ಬೆನ್ನಿಗೆ ಬಿದ್ದ ಕಡುಬನ್ನು ಲಕ್ಷಿಸದೆ ಪದ್ದಿ ಮತ್ತೂ ನಗುತ್ತ "ನೀನು ಶಿಸ್ತು ಅಂತೆಲ್ಲ ಹೇಳಿದೆಯಲ್ಲ ಅದಕ್ಕೇ ಜ್ಞಾಪಕಕ್ಕ ಬಂತು" ಅಂತ ಏನೋ ಅನ್ನೋದರಲ್ಲಿದ್ದಳು. ಅಮ್ಮ ಬಡಿಸೋದನ್ನ ನಿಲ್ಲಿಸಿ ಅವಳನ್ನೆ ದಿಟ್ಟಿಸಿ ನೋಡಿದಳು, ಕಣ್ಣು ಕೆಂಪಗೆ ಮಾಡಿಕೊಂಡು, ಆಗ ಎಲ್ಲರೂ ಸುಮ್ಮನಾದೆವು.

ಮಾರನೆ ದಿನ ಶಿಂಗಮ್ಮನ ಮನೆಗೆ ಊಟಕ್ಕೆ ಹೋಗಿದ್ದೆವು. ಅಮ್ಮ ಹೇಳಿದ್ದು ಸುಳ್ಳಲ್ಲ, ಅವರ ಮಕ್ಕಳ ಶಿಸ್ತೆ ಶಿಸ್ತು. ಊಟಕ್ಕೆ ಮೊದಲು ಎಲ್ಲವು ಕೈತೊಳೆದು ಬರೋದೇನು, ಟವಲುಗಳಿಂದ ಕೈ ಒರೆಸಿಕೊಳ್ಳೋದೇನು ಚಿಕ್ಕ ಪಿಲ್ಟುವಿನಿಂದ ತೊಡಗಿ ದೊಡ್ಡವರ ತನಕ ಅನ್ನಪೂರ್ಣೆ ಸದಾಪೂರ್ಣೆ ಹೇಳೋದೇನು ಎಲ್ಲವರಲ್ಲೂ ಶಿಸ್ತೇ ಶಿಸ್ತು. ನಮಗೆ ನಮ್ಮ ಊಟಕ್ಕಿಂತಲೂ ಆ ಮಕ್ಕಳು ಊಟ ಮಾಡುತ್ತಿದ್ದುದರ ಮೇಲೆಯೇ ಕಣ್ಣು ಅಮ್ಮ ಹೇಳಿದ್ದಳಲ್ಲ ಆ ಮಕ್ಕಳನ್ನು ನೋಡಿಯಾದರೂ ಕಲೀರಿ ಅಂತ. ಅವು ಒಂದೇ ಒಂದು ಅನ್ನದ ಅಗಳು ಬೀಳದಂತೆ ಬಹು ಜಾಗರೂಕತೆಯಿಂದ ಊಟ ಮಾಡುತ್ತಿದ್ದುವು ಯಾವುದೇ ಪದಾರ್ಥವನ್ನು ಇನ್ನೂ ಸ್ವಲ್ಪ ಬೇಕು ಎಂದು ಕೇಳುತ್ತಿರಲಿಲ್ಲ. ನಮಗೆ ಮನೆಯಲ್ಲಿನ ನಮ್ಮ ಊಟದ ಗೊಂದಲವನ್ನು ನೆನೆಸಿಕೊಂಡು ಬಲು ನಾಚಿಕೆಯಾಯಿತು.

ನಮ್ಮ ಎದುರಿಗೆ ಲಿಂಗಮ್ಮನವರ ಮಗಳು ನಾಲ್ಕು ವರ್ಷದ ಪಾತು ಊಟಕ್ಕೆ ಕುಳಿತಿತ್ತು. ಚಿರೋಟಿ ಪಾಯಸ ಹೊಟ್ಟೆಬಿರಿಯ ತಿಂದ ನಾವು ಮೊಸರಿಗೆ ಅನ್ನ ಬೇಡ ಎಂದೆವು. ಆದರೆ ಪಾತು ಬೇಡವೆನ್ನದೆ ಅನ್ನ ಇಕ್ಕಿಸಿಕೊಂಡಿತು. ಆದರೆ ನಾವೆಲ್ಲ ಊಟಮಾಡಿ ಎದ್ದರೂ ಅದು ಅನ್ನ ಮೊಸರು ಕಲಿಸಿಕೊಳ್ಳುತ್ತ ಇತ್ತೇ ಹೊರತು ಬಾಯಿಗಿಕ್ಕಿ ಕೊಳ್ಳಲಿಲ್ಲ. ಮಾತ್ರವಲ್ಲದೆ ಅದು ಕಲಸುವ ರೀತಿಯಲ್ಲಿ ಅವಕ್ಕೆ ಮೊಸರನ್ನ ಬೇಕೆನಿಸಿದಂತೆಯೂ ಕಾಣಲಿಲ್ಲ ಆದರೆ ಬಿಟ್ಟೇಳಲು ಧೈರ್ಯವಾಗಲಿಲ್ಲ ಆಚೆ ನೋಡಿತು ಈಚೆ ನೋಡಿತು ಮೈ ಮುರಿತೆಗೆಯಿತು. ಕೆಮ್ಮಿತು ಮುಖ ಬಾಡುತ್ತ ಬಂತು.

ಆಗ ಅಲ್ಲಿ ಹಾದು ಹೋದ ಲಿಂಗಮ್ಮ "ಏನು ಬೇಕೆ ನಿನಗೆ, ಬೇಗ ಊಟ ಮಾಡಿ ಏಳಬಾರದೆ" ಎಂದು ಗದರಿದರು. ಪಾತು ತಾಯಿ ಹೋದ ಕಡೆಗೇ ದೈನ್ಯ ದಿಂದ ನೋಡಿತು.

ಆಗ ಎದುಗರುಗಡೆ ಊಟಕ್ಕೆ ಕುಳಿತಿದ್ದ ನಮ್ಮಮ್ಮ "ಮೆಚ್ಚೋದಿಲ್ವೆ ಮರಿ, ಮೆಚ್ಚದಿದ್ದರೆ ಬಿಟ್ಟುಬಿಡು" ಎಂದರು, ಅದರ ಸಂಕಟವನ್ನು ಅರ್ಥಮಾಡಿಕೊಂಡು

ಬಾಡಿದ ಮೋರೆಯಲ್ಲಿ ಸಣ್ಣದೊಂದು ನಗು ಮಿಂಚಿ ಮಾಯವಾಯಿತು.

"ಏಳು ಮರಿ. ಏಳು ಮೆಚ್ಚದಿದ್ದರೆ ಬಿಡು" ಎಂದರು ಮತ್ತೆ.

"ಅನ್ನ ಬಿಡಬಾರದಲ್ವೆ...ಬಿಟ್ಟರೆ ಅಮ್ಮ ಹೊಡೀತಾಳೆ,..ಫ್ರಾಕಿನ ಲಾಡಿ ಬಿಚ್ಚಿ ದರೆ ಊಟ ಮಾಡ್ತೀನಿ" ಎಂದಿತು.

ಅಷ್ಟರಲ್ಲಿ ಮತ್ತೆ ಆ ಕಡೆ ಬಂದ ಲಿಂಗಮ್ಮ ಪಾತುವಿನ ಬೆನ್ನಿಗೆ ಬಲವಾಗಿ ನಾಲ್ಕು ಬಡಬಡನೆ ಹೇರಿ ಅದು ಅಳುತ್ತಿದ್ದಂತೆ ದರದರನೆ ಬಚ್ಚಲು ಮನೆಗೆ ಎಳೆದು ಕೊಂಡು ಹೋದರು. "ಇಕ್ಕಿಸಿಕೊಳ್ಳೋದ್ಯಾಕೆ, ಬಿಡೋದು ಯಾಕೆ" ಅಂತ ಚೆನ್ನಾಗಿ ಬೈದರು.

ಮನೆಗೆ ಬಂದ ಮೇಲೆ ಆ ವಿಷಯ ಪ್ರಸ್ತಾಪಿಸುತ್ತ ಅಮ್ಮ "ಆ ಲಿಂಗಮ್ಮನ ಎಸ್ಟಿಗೆ ಕಲ್ಲು ಬಿತ್ತು. ಏನು ಶಿಸ್ತೋ ಹಾಳಾದ್ದು...ಮೆಚ್ಚದಿದ್ದರೆ ಮಗು ಒಂದಿಷ್ಟು ಅನ್ನ ಬಿಡಬಾರದಂತೆ! ಏನು ಮಹಾ ಶಿಸ್ತೋ" ಎಂದರು.

—ರಾ ಮಿ.

———

ಬಾಹ್ಯಾಕಾಶಯಾನ

(ಮುಂದುವರಿದುದು)

ವ್ಯಕ್ತಿ—ನನಗೆ ರಾಕೆಟ್ಟುಗಳ ಪರಿಚಯವಿಲ್ಲ. ನಾನು ಅವುಗಳನ್ನು ಅರಿಯಲೂ ಇಲ್ಲ. ಆದರೆ ನಿಮ್ಮಂತೆ ಬಾಹ್ಯಾಕಾಶಯಾನ ಮಾಡಿದ ಕೆಲವರು ದೈತ್ಯರನ್ನು ನೋಡಿದ್ದೇನೆ.

ಸಮಿತಿ—ಅವರಾರು ? ಏಕೆ ಬಾಹ್ಯಾಕಾಶಯಾನ ಮಾಡಿದರು ಹೇಗೆ ಮಾಡಿದರು.

ವ್ಯಕ್ತಿ...ಅವರ ಪರಿಚಯ ನನಗಿಲ್ಲ. ಭೂಮಿಯನ್ನು ಬಿಟ್ಟುಮೇಲೆ ಹೋಗಲು ಬಯಸಿದ ಅವರ ಉದ್ದೇಶ್ಯಗಳು ಮನುಷ್ಯರ ಒಳಿತಿಗಾಗಿ ಇರುವುದು ಅಸಾಧ್ಯ. ಮೊದಲು ಈ ಬಾಹ್ಯಾಕಾಶಯಾನ ಮಾಡಿದವರು ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬುವರು. ಅವರು ಅಂತರಿಕ್ಷದಲ್ಲಿ ನಗರಗಳನ್ನು ಕಟ್ಟಿ ಭೂಮಿಯನ್ನು ಮುಟ್ಟಿ ಆಳಿದರು. ಅವರಿಗೆ ಭೂಮಿಯಲ್ಲಿ ಯಾವ ವಿಧದ ಪುರಸ್ಕಾರವೂ ಸಿಕ್ಕಲಿಲ್ಲ. ಭಾರತೀಯರು ಅವರನ್ನು ರಾಕ್ಷಸರೆಂದು ಕರೆದು ನಾಶ ಮಾಡಿದರು.

ಸಮಿತಿ—ಆ ಜ್ಞಾನವನ್ನು ನೀವು ಅರಿತುಕೊಳ್ಳಲಿಲ್ಲವೋ ?

ವ್ಯಕ್ತಿ—ಅದು ಜ್ಞಾನವೇನು ? ಅದಾದಬಳಿಕ ಕಳೆದ ದ್ವಾಪರಾಂತ್ಯದಲ್ಲಿ ಕುಂಭ ನಿಕುಂಭರು ಗಗನ ನಗರಿಗಳನ್ನು ಕಟ್ಟಿದರು. ಶ್ರೀ ಕೃಷ್ಣ ಒಂದೇ ಬಾಣದಿಂದ ಅವನ್ನು ಹೊಡೆದು ಹಾಕಿದನಂತೆ.

ಸಮಿತಿ—ನೀನು ಬಾಹ್ಯಾಕಾಶಯಾನ ಮಾಡಿದುದು ಹೇಗೆ ? ಯಾವಾಗ ?

ವ್ಯಕ್ತಿ—ಬಹು ಹಿಂದೆ ಒಮ್ಮೆ ನಾನು ತಪಸ್ಸಿಗೆ ಕುಳಿತಿದ್ದೆ. ಹಾಗೆಯೇ ಎಚ್ಚರವಾಯಿತು. ಕಣ್ತೆರೆದು ನೋಡಿದೆ. ಪಂಚಭೂತಗಳ ವಿಕಾರವನ್ನು ನೋಡಿ ಜಲಪ್ರಳಯ ಸಂಭವಿಸಲಿದೆಯೆಂದು ತೀರ್ಮಾನಿಸಿದೆ.

ಸಮಿತಿ—ಜಲಪ್ರಳಯವೆಂದರೇನು ?

ವ್ಯಕ್ತಿ—ಆಗಾಗ ಇಡೀ ಪ್ರಪಂಚವೇ ನೀರಿನಲ್ಲಿ ಮುಳುಗಿ ಕೆಲವು ಕಾಲ ಹಾಗೆಯೇ ಇದ್ದು ನಂತರ ಪುನಃ ಸೃಷ್ಟಿಯಾಗುತ್ತದೆ. ಅನೇಕ ಕೋಟಿ ವರ್ಷಗಳಿಗೊಮ್ಮೆ ಹೀಗಾಗುವುದನ್ನು ನಾನು ಜಲಪ್ರಳಯವೆಂದು ಕರೆಯುತ್ತೇನೆ ?

ಸಮಿತಿ—ನಮ್ಮ ವಿಜ್ಞಾನಿಗಳು ಇದೆಲ್ಲವೂ ಕಟ್ಟುಕತೆಯೆಂದು ಸಾಧಾರಣವಾಗಿ ಸಿದ್ಧಪಡಿಸಿದ್ದಾರೆ.

ವ್ಯಕ್ತಿ :—ಅದೃಷ್ಟವಶಾತ್, ನಿಯತಿ ಚಕ್ರವು ನಿಮ್ಮ ವಿಜ್ಞಾನಿಗಳ ಆದೇಶದಂತೆ ನಡೆಯುತ್ತಿಲ್ಲ.

ಸಮಿತಿ :—ನೀನು ಚರಿತ್ರ ಪೂರ್ವ ಮಾನವನಾಗಿದ್ದರೂ ಕಪಿ ಅಥವಾ ಪ್ರಾಣಿಗಳಂತಿಲ್ಲದಿರುವುದು ಆಶ್ಚರ್ಯಕರ. ನೀನು ಬಾಹ್ಯಾಕಾಶಕ್ಕೆ ಹೋದಾಗ space suit ಹಾಕಿಕೊಂಡಿದ್ದೆಯೋ ?

ವ್ಯಕ್ತಿ :—ನಮ್ಮ ಕಾಲದಲ್ಲಿ ಬಾಹ್ಯಾಕಾಶಯಾನ ಒಂದು ದೊಡ್ಡ ಸಾಧನೆಯೆಂದು ಯಾರೂ ಭಾವಿಸಿರಲಿಲ್ಲ. ನಾನು ಬಾಹ್ಯಾಕಾಶಯಾನಕ್ಕೆ ಹೊರಡುವ ಮೊದಲು ಯಾವ ಸಿದ್ಧತೆ ಮಾಡಿಕೊಳ್ಳಲೂ ಬಿಡುವಿರಲಿಲ್ಲ ..ಮೊದಲೇ ಹೇಳಿದಂತೆ ಕಣ್ಣುಬಿಟ್ಟು ನೋಡಿ ಪ್ರಳಯ ಇನ್ನೊಮ್ಮೆ ಸಮೀಪಿಸಿರಬಹುದೆಂದುಕೊಂಡೆ. ಅಷ್ಟರಲ್ಲಿ ಚತುರ್ಮುಖ ಹಿರಣ್ಯಗರ್ಭನು ನನ್ನನ್ನು ಮಾತನಾಡಿಸಿದ.

ಸಮಿತಿ :—ಅವನು ಯಾರು ?

ವ್ಯಕ್ತಿ :—ಅವನಾರು ಎಂದು ಗೊತ್ತಿಲ್ಲದ ನಿಮ್ಮನ್ನು ಏನು ಮಾಡಬೇಕೋ ತಿಳಿಯದು. ನನಗೆ ರಾಕೆಟ್, ಸ್ಪೇಸ್ ಸೂಟ್ ಎಂದರೇನೆಂಬುದು ತಿಳಿದಿಲ್ಲ ನಿಮಗೆ ಚತುರ್ಮುಖ ಬ್ರಹ್ಮನಾರು ಎಂದು ತಿಳಿದಿಲ್ಲ ಅದಕ್ಕದು ಸರಿಹೋಯಿತು.

ಅವನು ಬಂದು ನಿನಗೇನು ವರಬೇಕು ಎಂದು ಕೇಳಿದ. ನಾನು ರೇಗಿ ನನಗೆ ಕಾಣಿಸುವ ನೀನು ಇನ್ನೆಂತಹ ವರವನ್ನು ಕೊಟ್ಟೀ ? ಎಂದೆ ಅದಕ್ಕವನು ನಾನು ಸಮಸ್ತ ಲೋಕಕ್ಕೂ ಸೃಷ್ಟಿ ಕರ್ತ. ನನಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂದ. ನಾನು ನಿನ್ನ ಪ್ರತಿಷ್ಠೆ ನಿನ್ನಲ್ಲೇ ಇರಲಿ ಎಂದೆ,

ಸಮಿತಿ—ಬ್ರಹ್ಮನೆಂಬ ಸೃಷ್ಟಿಕರ್ತನೊಬ್ಬನಿರುವನೋ ಇಲ್ಲವೊ ಎಂಬುದೇ ಸಂದೇಹ. ಕ್ರಿಸ್ತನ ಜನ್ಮದಿಂದ (ಚತುರ್ಮುಖ ಬ್ರಹ್ಮನೇ ಮೊದಲಾದ) ಮೂಢ ನಂಬಿಕೆಗಳೆಂದು ಸಿದ್ಧವಾಗಿವೆ.

ವ್ಯಕ್ತಿ—ಅವನಾರು ?

ಸಮಿತಿ—ಅವನು ದೇವರ ಮಗ.

ವ್ಯಕ್ತಿ—ಅವನು ಚತುರ್ಮುಖ ಬ್ರಹ್ಮನಿಲ್ಲವೆಂದು ಹೇಳಿದನೋ ?

ಸಮಿತಿ—ಇಲ್ಲ. ಆದರೆ ದೇವರ ರಾಜ್ಯಕ್ಕೆ ದಾರಿ ತೋರಿದವನು ಅವನೊಬ್ಬನೇ

ವ್ಯಕ್ತಿ—ನನ್ನ ಗಮನಕ್ಕೆ ಆ ವಿಷಯ ಬಂದಿಲ್ಲ. ಭಗವಂತನು ಈ ಸೃಷ್ಟಿಯಲ್ಲಿ ತನಗೆ ದ್ವೇಷಿಗಳು ಪ್ರೀತಿ ಪಾತ್ರರು ಎನ್ನುವ ಪಂಗಡಗಳಿಲ್ಲವೆಂದೂ, ಎಲ್ಲರಲ್ಲೂ ತಾನು ಸಮಭಾವದಿಂದಿರುವುದಾಗಿಯೂ ಹೇಳಿದ್ದಾನೆ. ಅದು ಮೂಢನಂಬಿಕೆಯೋ ? ಭೇದಭಾವ ಬಗೆಯುವುದೇ ಜ್ಞಾನವಿರಬೇಕು. ಇದನ್ನು ತಂದವರು ನೀವೋ ಅಥವಾ ಕ್ರಿಸ್ತನೋ.

ಸಮಿತಿ—ವಿಗ್ರಹಾರಾಧಕರಾದ ನೀವು...

ವ್ಯಕ್ತಿ—ವಿಗ್ರಹಾರಾಧನೆಯ ಅರ್ಥವರಿಯದ ಮೂಢರಾದ ನಿಮ್ಮನ್ನು. ನಿರ್ಗುಣಾರಾಧನೆ ಮಾಡುವ ಏಕ ಮಾತ್ರ ಮನುಕುಲದ ಪಂಗಡವಾದ ಭಾರತೀಯರು

ಸಮಿತಿ—ಹೋಗಲಿ ಮುಂದೇನಾಯ್ತು ?

ವ್ಯಕ್ತಿ—ಹೋಗಲಿ ನಿಮಗೆ ಇದುವರೆಗೆ ಏನಾಗಿತ್ತು ? ನಿಮಗೆ ವಿವೇಕ ದೂಸ್ತ ವಾದುದರಿಂದ ಹೀಗೆ ಉದ್ವೇಗಕ್ಕೊಳಗಾಗುವಿರೆಂದು ತೋರುತ್ತದೆ ಚತುರ್ಮುಖ ಬ್ರಹ್ಮನು ನನ್ನನ್ನು ಮಾತನಾಡಿಸಿದಾಗ ನಾನೂ ಉದ್ವೇಗಕ್ಕೊಳಗಾಗಿದ್ದೆ. ಅಷ್ಟರಲ್ಲಿ ಆವರ್ತಮಾರುತವೊಂದು ಬೀಸಿ ನಮ್ಮನ್ನು ಬಾಹ್ಯಾಕಾಶಕ್ಕೆ ಕರೆದೊಯ್ಯಿತು.

ಸಮಿತಿ—ಭೂಮಿಯನ್ನು ಎಷ್ಟುಬಾರಿ ಸುತ್ತಿ ಕೆಳಗಿಳಿದಿರಿ.

ವ್ಯಕ್ತಿ—ನಾವು ನೀಹಾರಿಕೆಗಳ ಯಾನ ಮಾಡಿ ವಿವಿಧ ಲೋಕಗಳ ವೀಕ್ಷಣೆ ಮಾಡಿದೆವು.

ಸಮಿತಿ—ಎಷ್ಟು ಲೋಕಗಳಲ್ಲಿ ಜೀವರಾಶಿಯಿದೆ.

ವ್ಯಕ್ತಿ—ನಾವು ಒಳಹೊಕ್ಕು ನೋಡಿದುದು ಎಂಟು ಲೋಕಗಳನ್ನು ಜೀವರಾಶಿ ಯಿರುವ ಲೋಕಗಳು ಅಸಂಖ್ಯಾತ.

ಸಮಿತಿ- ಅವುಗಳಲ್ಲಿ ನಿಮ್ಮ ಅಭಿಪ್ರಾಯದಂತೆ ಅತ್ಯಂತ ಮುಂದುವರಿದುದು ಯಾವ ಲೋಕ ?

ವ್ಯಕ್ತಿ—ಮುಂದುವರಿದುದು ಎಂದರೆ ಯಾವ ಅರ್ಥದಲ್ಲಿ, ಸಮಸ್ತ ಲೋಕ ವನ್ನೇ ನಾಶಮಾಡಬಲ್ಲ ಶಕ್ತಿ ನಿಮಗಿದೆಯೆಂದೂ ಆದುದರಿಂದ ನೀವೇ ಬಹಳ ಮುಂದುವರಿದವರೆಂದೂ ಜಂಬಕೊಚ್ಚಿಕೊಂಡಿರಿ.

ಸಮಿತಿ—ಹಾಗಲ್ಲ ವಿಜ್ಞಾನದ ಬೆಳವಣಿಗೆ...

ವ್ಯಕ್ತಿ—ಎಂದರೆ ಮಾರಕಾಸ್ತ್ರಗಳ ಬೆಳವಣಿಗೆಯೋ, ಶೋಷಣೆಯ ಬೆಳ ವಣಿಗೆಯೋ ?

ಸಮಿತಿ—ನಿಮ್ಮ ಅಭಿಪ್ರಾಯದಂತೆ...

ವ್ಯಕ್ತಿ—ನನ್ನ ಅಭಿಪ್ರಾಯದಂತೆ ಅಹಂಕಾರ ನಿರ್ಮೂಲನವಾದ ಸಹಸ್ರಮುಖ ಬ್ರಹ್ಮನ ಲೋಕವೇ ಬಹು ಮುಂದುವರಿದದ್ದು.

ಸಮಿತಿ—ಅಲ್ಲಿ ಏನನ್ನು ಕಲಿತಿರಿ ? ನೋಡಿದ್ದು ಏನನ್ನು ?

ವ್ಯಕ್ತಿ—ಒಂದು, ನಾಲ್ಕು, ಎಂಟು ಹೀಗೆ ತಲೆಗಳುಳ್ಳ ನಾವು ಬಿಂಕದಿಂದ ಬೀಗುತ್ತಿದ್ದರೆ, ಸರ್ವಾತ್ಮಕನಾದ ಆ ಭಗವಂತ ವಿನಯದ ಮೂರ್ತಿಯಾಗಿದ್ದ.

ಸಮಿತಿ—ದಯೆಯಿಟ್ಟು ನಿಮ್ಮ ಹೆಸರನ್ನು ಹೇಳಿ.

ವ್ಯಕ್ತಿ—ನನ್ನನ್ನು ಬಕದಾಲ್ಭ್ಯನೆನ್ನುತ್ತಾರೆ.

—ಅ. ರಾ ಸೇ.

ಮೂರನೇ ದೀಪಾವಳಿ

ಚಿ|| ಸೇತುವಿಗೆ ಆಶೀರ್ವಾದಗಳು.

ನಿನ್ನ ಕಾಗದ ನೋಡಿ ಮನಸ್ಸಿಗೆ ಬಹಳ ಚಿಂತೆಯಾಗಿದೆ. ಮತ್ತೆ ಪುನಃ ಕೆಲಸ ಕಳೆದುಕೊಂಡೆಯೆಂದು ಬರೆದಿದ್ದೀಯೆ. ದ್ವಾಪರ ಯುಗದಲ್ಲಿ ದ್ರೌಪದಿ ಹುಟ್ಟಿದಾಗ "ಇವಳು ಕಾಲಿಟ್ಟ ಕಡೆ ಕ್ಷತ್ರಿಯರ ನಾಶವಾಗುತ್ತದೆ" ಎಂದು ಅಶರೀರ ವಾಣಿ ನುಡಿಯಿತಂತೆ. ನೀನು ಹುಟ್ಟಿದಾಗ, "ಇವನು ಕೈಯಿಟ್ಟ ಕಂಪೆನಿ, ಕಾರ್ಖಾನೆ, ದಿವಾಳಿ ಆಗುತ್ತೆ" ಎಂದು ಸಶರೀರಳಾದ ಸೂಲಗಿತ್ತಿ ಸಾರಮ್ಮನಾದರೂ ನನಗೆ ಹೇಳಬಾರದಿತ್ತೇ!

ಮೈಸೂರಿಗೆ ಬರುವ ಅಭಿಪ್ರಾಯ ಸೂಚಿಸಿದ್ದೀಯೆ. ಆದರೆ "ದೀಪಾವಳಿಗೆ ಹೊಸ ಅಳಿಯನನ್ನು ಕರೆಸುತ್ತೇನೆ, ಅಡಿಗೆ ಭಟ್ಟರನ್ನೂ ಕರೆಸುತ್ತೇನೆ; ಉಗ್ರಾಣದ ಕಾವಲಿಗೆ ಬಾ" ಎಂದು ಸಾಲಿಗ್ರಾಮದಿಂದ ಸುಬ್ಬಿ ಹೇಳಿ ಕಳಿಸಿದಾಳೆ. ಮಧ್ಯಾಹ್ನದ ಬಸ್ಸಿಗೆ ಹೊರಟಿದ್ದೇನೆ.

ನೀನು ಯಥಾಪ್ರಕಾರ ಬೆಂಗಳೂರಿಗೆ ನಿನ್ನ ಮಾವನ ಮನೆಗೆ ಹೋಗು; ಮೂರ್ರನೇ ದೀಪಾವಳಿ ಆದರೇನಂತೆ! ವರ್ಷದಲ್ಲಿ ಹತ್ತು ತಿಂಗಳು ತೌರುಮನೆಯಲ್ಲಿ ಹೇಗೂ ಕೂತುಣ್ಣುತ್ತಿದ್ದಾಳೆ ಅವರ ಮಗಳು. ಜೊತೆಗೆ ಅಳಿಯನೂ ಉಂಡುಕೊಂಡು ಅನ್ನ ಹಾಕುತ್ತಾರೆ! ಇನ್ನೇನೂ ವಿಶೇಷವಿಲ್ಲ.

ನಿನ್ನ ಅಮ್ಮ,
ಸಾತಮ್ಮ
ಬೆಂಗಳೂರು,
30—10—64

ಮಾ|| ಶ್ರೀ|| ಯವರಿಗೆ ನಮಸ್ಕಾರಗಳು,

ನಿಮ್ಮ ಕಾಗದ ಕಂಡು, ವಿಧಿಯಿಲ್ಲದೆ, ಬೆಂಗಳೂರಿಗೇ ಕಂಬಿ ಕಿತ್ತೆ. ದೀಪಾವಳಿಗೆ ಸರಿಯಾಗಿ ಕಂಪೆನಿ ದೀವಾಳಿ ಎಬ್ಬಿಸಿ ಮೂರನೇ ಸಾರಿಯ ಹಬ್ಬಕ್ಕೆ ವಕ್ಕರಿಸಿದ ಭಂಡ ಅಂತ ಎಷ್ಟು ತಾತ್ಸಾರ ಮಾಡುತ್ತಾರೋ ಎಂದು ಹೆದರುತ್ತಲೇ ಹೆಜ್ಜೆ ಒಳಕ್ಕಿಟ್ಟೆ. ನನ್ನ ಮುಖ ನೋಡಿದಕೂಡಲೇ ಅತ್ತೆಮ್ಮ, ಮಾವಯ್ಯ, ಹಿಗ್ಗಿ ಅರಳಿ ಆನಂದದಿಂದ ಒಬ್ಬರ ಮುಖ ಒಬ್ಬರು ನೋಡಿಕೊಂಡರು! ಆದರದಿಂದ ಒಳಕ್ಕೆ ಕರೆದುಕೊಂಡು

ಹೋಗಿ ಕಾಫಿಕಾಸಿ, ಕಾರದವಲಕ್ಕಿ ತಟ್ಟೆ ಸಹಿತ ಕಾವೇರಿಯನ್ನು ಕೊರಡಿಗೆ ಕಳಿಸಿದರು "ಭಾವ ಬಂದ, ನಾವಿನ್ನು ಗೆದ್ದೆವು!" ಎಂದು ನೆಗೆದಾಡಿದುವು ನಾದಿನಿ ಮೈದುನರ ಸೇನೆ. ಮೊದಲ ದೀಪಾವಳಿಗೆ ಬಂದ ಭಾವನನ್ನು ಕಂಡಂತೆ! ಕಾವೇರೀಕೂಡ ಕಿಡಿಗಣ್ಣು ಹಾರಿಸದೆ, ಕುಲುಕುಲು ನಕ್ಕಳು!

ಬೆಳಗಿನ ಜಾವ ಬೊಂಬಾಯಿನ ಭಾರೀ ಕಂಪೆನಿಯ ಮ್ಯಾನೇಜರಾಗಿ, ಹಾರ ಹಾಕಿಸಿಕೊಂಡು Flash bulb ಗಳ ಮುಂದೆ ಕೈ ಕುಲುಕಿಸಿಕೊಳ್ಳುತ್ತಿರುವ ಸವಿಗನಸು! ಕದ ತಟ್ಟಿದರು. ಯಾರೋ—ಗೊಣಗುತ್ತ ಬಾಗಿಲು ತೆಗೆದೆ ಮಾವಯ್ಯ ಕೈಲೆರಡು ಚೀಲ ಹಿಡಿದು ನಿಂತಿದ್ದರು, "ಹಿ ಹಿ ಹಿ...ನಿದ್ದೆ ಆಯ್ತೇನೋ? ಹಿ ಹಿ ಹಿ. .ಸೊಸೈಟಿ ನೋಡಿದೀರಲ್ವೇ? ..ಅಂದ್ಹಾಗೇ, ಹೋದ ಸಾರಿ ಬಂದಾಗ ಅಲ್ಲೇ ಪಂಚೆ ತೆಗೆಸ್ಕೊಂಡಿದ್ರಲ್ಲ ನನ್ನ ಕೈಲಿ! .ಅಲ್ಲಿ ಅಕ್ಕಿ, ಗೋಧಿ ಕೊಡ್ತಾರೆ, ಬೇಗ ಹೋದರೆ ಬೇಗ ಸಿಗುತ್ತೆ. ಹಿ ಹಿ ಹಿ...ನಿಮಗೇನು ಹುಡುಗರು, ಛಳಿಗಿಳಿ ತೋರುಲ್ಲ! ...ಹಿಡೀರಿ—ಇದು ಗೋಧಿಗೆ, ಇದು ಅಕ್ಕಿಗೆ!" ಎರಡು ಕೈಗಳಿಗೂ ಚೀಲ ತುರುಕಿ ಕತ್ತಲಲ್ಲಿ ಕರಗಿಹೋದರು. ಟವಲ್ಲು ಹೊದ್ದು ಚಪ್ಪಲಿ ಮೆಟ್ಟಿ, ಸೊಸೈಟಿಗೆ ಹೋದೆ.

ಸುಮಾರು ಅರ್ಧ ಮೈಲುದ್ದ 'ಕ್ಯೂ' ನಿಂತಿತ್ತು. ಅವರೆಲ್ಲ ರಾತ್ರಿ ಅಲ್ಲೇ ಮಲಗಿದ್ದರೆಂದು ತೋರುತ್ತೆ! ಅವರ ಹಿಂದೆ ನಾನೂ ನಿಂತೆ. ಹನ್ನೊಂದು ಗಂಟೆ ಹೊತ್ತಿಗೆ ಮೂರು ಕೆ. ಜೆ. ಅಕ್ಕಿ, ಎರಡು ಕೆ. ಜಿ. ಗೋಧಿ ಅಳೆದ ಆಳು—"ತೊಗೊಂಡೋಗ್ರೀ ಸಾಮಿ" ಅಂದ, ತಿರುಪೆ ಚೀಲಕ್ಕೆ ಹಾಕಿದ ಧಾಟಿಯಲ್ಲಿ! ಚೀಲಗಳನ್ನೂ, ಖಾಲೀ ಹೊಟ್ಟೆಯನ್ನೂ ಹೊತ್ತು ಮನೆಗೆ ಹಿಂದಿರುಗಿದೆ, ಅತ್ತೆಮ್ಮ ಬಿಸಿಬಿಸಿಯಾಗಿ ಬೆಂಡೆಕಾಯಿ ಹುಳಿ, ಅನ್ನ ಬಡಿಸಿ ಉಪಚರಿಸಿದರು, ಉಂಡು ಮಲಗಿದೆ.

ಮೂರು ಗಂಟೆಗೆ ಮೈದುನ ಮುರಳಿ ಮತ್ತೆರಡು ಚೀಲ ಕೈಗಿಟ್ಟು, "ಚಾಮರಾಜಪೇಟೆ ಸೊಸೈಟೀಲಿ ಮಧ್ಯಾಹ್ನ ಸಕ್ರೆ, ಅಕ್ಕಿ ಎರಡೂ ಕೊಡ್ತಾರಂತೆ ಭಾವಾ!" ಅಂದವನೇ ಹಾರಿಹೋದ! ಕಾಫೀ ಕಪ್ಪು ಹಿಡಿದುತಂದ ಕಾವೇರಿಯನ್ನು ಕೆಂಗಣ್ಣಿನಿಂದ ನೋಡಿದೆ. "ಉಶ್" ಎಂದು ಸನ್ನೆ ಮಾಡಿ, "ಗಂಭೀರವಾಗಿ ಹೋಗಿ ಬನ್ನಿ!" ಅಂತ ಅರ್ಥವತ್ತಾಗಿ ಹುಬ್ಬು ಹಾರಿಸಿ ಹೊರಟೇಹೋದಳು!

ಮೂರು ದಿನ ಎರಡು ಹೊತ್ತೂ ಊರಿನ ಸೊಸೈಟಿಗಳೆಲ್ಲದರ ಮುಂದೆಯೂ ಉತ್ಸವ ಮೂರುತಿಯಾಗಿ ನಿಂತಿದ್ದು, ದಿನಸಿ ಶೇಖರಿಸಿದ್ದಾಯ್ತು. "ನಾಳಿನಿಂದ ತೊಂದರೆಯಿಲ್ಲಪ್ಪ, ಕಾರ್ಡು ಕೊಟ್ಟು ಹೋಗಿದ್ದಾರೆ" ಎಂದು ನಗುತ್ತ ಹೇಳಿದರು, ಮಾವಯ್ಯ. ಬಾತ ಕಾಲುಗಳಿಗೆ ಮಾಲೀಸು ಮಾಡಿಕೊಳ್ಳುತ್ತ ಮಲಗಿದೆ.

ಬೆಳಗಾಯಿತು. ಇವತ್ತಾದರೂ ಮನೆಯಲ್ಲಿರುತ್ತೇನೆ. ಊದಿದ ಕಾಲುಗಳಿಗೆ ಬಿಸಿನೀರು ಹುಯ್ದುಕೊಂಡು, ಕಾವೇರೂ ಕೈಲಿ ಪಗಡೆ ಆಡುತ್ತ ಕಾಲ ಕಳೆಯೋ ಅವಕಾಶ! ಎಂದು ಕನಸು ಕಂಡೆ, ಉಪ್ಪಿಟ್ಟು ನುಂಗುತ್ತಿದ್ದ ಮಾವನವರು, "ನಮ್ ಕಾರ್ಡ್‌ನ. ವಿಧಾನ ಸೌಧದ ಕೋ ಅಪರೇಟೀವ್ ಸೊಸೈಟಿಗೆ ಬರೆದಿದಾರೆ...ಹೆಚ್ಚಿಗೆ ಗಲಾಟೆಯೇನೂ ಇರೊಲ್ಲ, ಹೋಗಿ ಬಂದು ಬಿಟ್ಟರೆ ಹಬ್ಬಕ್ಕೆ ಸಾಮಾನೆಲ್ಲ ವೈನಾಗುತ್ತೆ!" ಎಂದು ಹಲ್ಲು ಕಿರಿದರು.

ಊಟ ಮುಗಿಸಿ ವಿಧಾನಸೌಧದ ಬಸ್ಸು ಹತ್ತಿದೆ. ಆ ಭವ್ಯಭವನದ ಮೂರಂತಸ್ತನ್ನೂ ಒಂದೊಂದಾಗಿ ಹತ್ತಿ, ಒಂದೊಂದರ ನಾಲ್ಕು ಕಾರಿಡಾರುಗಳಲ್ಲೂ ಪ್ರದಕ್ಷಿಣೆ ಹಾಕಿ ಪತ್ತೆ ಹಚ್ಚಿದೆ, ಸ್ಟೋರು ಬಾಗಿಲು ಹಾಕಿರುವುದನ್ನು. ಮತ್ತೆ ಕೆಳಗಿನಂತಸ್ತಿಗೆ ಇಳಿದು, ಶಾಖೆಯ ಸೆಕ್ರೆಟರಿಗಳ ಕೊಠಡಿಯ ಬಾಗಿಲಿಗೆ ಬಂದೆ. ಸೆಕ್ರೆಟರಿಗಳು ರಜಾ ಹೋಗಿದ್ದಾರೆಂದು ಅರ್ಧ ಗಂಟೆಯ ನಂತರ ತಿಳಿಯಿತು. ಮಧ್ಯದ ಅಂತಸ್ತಿನಲ್ಲಿ ಶಾಖೆಯ ಅಧಿಕಾರಿಗಳಿದ್ದಾರೆಂದೂ ಅವರನ್ನು ಭೇಟಿ ಮಾಡಿದರೆ ಸರಿಯಾದ ಸುದ್ದಿ ಸಿಕ್ಕೀತೆಂದೂ ಸಲಹೆಯಿತ್ತ—ಸಮವಸ್ತ್ರದ ಸಿಬ್ಬಂದಿಯ ಆಳುಮಗನೊಬ್ಬ!

ಮತ್ತೊಂದಂತಸ್ತು ಮೇಲಕ್ಕೆ ಉತ್ಸವ ನಡೆಸಿ. ಅಧಿಕಾರಿಯ ಪತ್ತೆ ಹಚ್ಚಿ, ಕಾರ್ಡು ಕೈಗಿಟ್ಟು. ಕೈಮುಗಿದೆ. "ರೆವಿನ್ಯೂ ಮಂತ್ರಿಗಳ ಅಪ್ಪಣೆಮೇರೆಗೆ ನಿನ್ನೆಯಿಂದ ಇಲ್ಲಿನ ರೇಷನ್ ಷಾಪ್ ಮುಚ್ಚಿಬಿಟ್ಟಿದೀವ್ರೀ!" ಅಪ್ಪಣೆ ಕೊಡಿಸಿದರು ಅಧಿಕಾರಿಗಳು!...ಜೇಬು ಖಾಲಿಯಾಗಿತ್ತು, ವಿಧಾನಸೌಧದಿಂದ ನಿಧಾನವಾಗಿ ನಡೆದು ಈಗ ತಾನೇ ಮನೆ ತಲುಪಿದೆ!.,.....

ನನ್ನ ಮಗ,
ಸೇತೂರಾಮು.

* * * *

ಹೊತ್ತಿಗೆ ಮುಂಚೆ ಎದ್ದ ಸಾತಮ್ಮ ಹೊಸಲಿಗೆ ರಂಗೋಲಿ ಹಾಕಲೆಂದು ಹೊರಬಾಗಿಲು ತೆಗೆದಾಗ. ಜಗುಲಿಯಮ್ಲೊರಗಿ ಕೂತಿದ್ದ ಮಗನನ್ನು ನೋಡಿ ಬೆಪ್ಪಾದರು! "ಇದೇನೋ ಮಗು? ವರ್ಷಾವಧಿ ಹಬ್ಬದ ದಿನ ಅತ್ತೇಮನೆ ಬಿಟ್ಟು, ಸಾಲಿಗ್ರಾಮಕ್ಕೆ ಬಂದು ಕೂತಿದ್ದೀ?" ಎಂದರು.

"ಇನ್ನೇನು ಮಾಡಲಮ್ಮ? ವಿಧಾನ ಸೌಧದಿಂದ ಮನೆಗೆ ಬಂದು ಉಸಿರಾಡುವುದಕ್ಕೂ ಶಕ್ತಿಯಿಲ್ಲದೆ, 'ಉಸ್' ಅಂತ ರೂಮಿನಲ್ಲಿ ಕೂತೆ. ಅಡಿಗೇಮನೇಯಿಂದ ಅತ್ತೆ ಮಾವಂದಿರ ಸಂಭಾಷಣೆ ಕಿವಿಗೆ ಕೇಳಿಸಿತು. ಅತ್ತೆಮ್ಮ, ಅಲ್ಲಾಂದ್ರೇ ಈ ಕುಸುಬಲಕ್ಕಿ ಕೊಡ್ತಾರಲ್ಲ, ತೊಗೊಂಡು ಏನು ಮಾಡೋದು? ಅಂದರು. ಮಾವಯ್ಯ, ಅದಕ್ಯಾಕೆ ಯೋಚನೆ? ದಿನ ಬಿಟ್ಟು ದಿನ ನೆನೆಯಿಡು ದೋಸೆ ಇಡ್ಲಿಗೆ

ಬಂದಿದಾನಲ್ಲ ಸೈಂಧವ ಅಳಿಮಯ್ಯ ರುಬ್ಬಿಸು ಅವನ ಕೈಲಿ! "ಕಿಸಿಕಿಸಿ ನಕ್ಕರು ಇಬ್ಬರೂ...ಹ್ಯಾಂಡ್ ಬ್ಯಾಗ್ ಹಿಡಿದು ಸದ್ದಿಲ್ಲದೆ ಬಸ್ ಸ್ಟ್ಯಾಂಡ್ ದಾರಿ ಹಿಡಿದೇಮ್ಮ" ಸೇತುರಾಮ ಅಳುತ್ತ ಅಮ್ಮನ ಸೆರಗಿನಲ್ಲೇ ಕಣ್ಣೊರಸಿದ.

"ಅಳಬೇಡ ಕಂದ. ಹಂಡೆ ನೀರು ಕುದ್ದಿದೆ. ಹೊಸ ಅಳಿಯ ಏಳುವುದರೊಳಗೇ ಮಿಂದು ಬಿಡುವೆ ಬಾ!" ಎಂದು ಎಣ್ಣೆ ವತ್ತಿದಳು ಸಾತಮ್ಮ ಸೇತೂರಾಮನ ತಲೆ ಬುರುಡೆಗೆ.

— ಟಿ. ಸುನಂದಮ್ಮ.



ನನ್ನ ಹೆಂಡತೀನೂ ಮಹಿಳಾ ಲಾಯರ್
ಕಾನ್‌ಫರೆನ್ಸಿಗೆ ಹೋಗಿದ್ದಾಳೆ ಕಣೋ ಅದಕ್ಕೇ !!...

ಹೋತ ಹುಲಿಯ ಕತೆ

ಒಂದೂರಿನಲ್ಲಿ ಒಂದು ಹೋತ ಇತ್ತಂತೆ. ಊರಿನವರೆಲ್ಲಾ ಅದನ್ನು ಮಾರೀಗೆ ಮೀಸಲಾಗಿ ಬಿಟ್ಟಿದ್ದರಂತೆ ಮಾರೀ ಹೋತ ಅಂತ ಎಲ್ಲರಿಗೂ ತಿಳಿಯಲಿ ಅಂತ ಅದಕ್ಕೆ ಖಾದಿ ಮಾಲೆ ಹಾಕಿ ಒಂದು ಪುಟಾಣಿ ಗಂಟೇನ ಕಟ್ಟಿದ್ದರಂತೆ. ಖಾದಿ ಮಾಲೆ ಹಾಕಿಕೊಂಡು ಆ ಹೋತ ಕಂಡದ್ದನ್ನೆಲ್ಲಾ ಕಂಡಲ್ಲಿ ತಿಂದು ಯಾರ ಅಂಕೆಯೂ ಇಲ್ಲದೆ, ಯಾವ ಶಿಕ್ಷೆಯನ್ನೂ ಅನುಭವಿಸದೆ ಮಾವನ ಮನೆಗೆ ಮೊದಲ ಸಲ ಬಂದ ಅಳಿಯನ ತರಹ ಕೊಬ್ಬಿ ಬೆಳೆದಿತ್ತಂತೆ.

ಒಂದು ದಿವಸ ಮಾರಿ ಗುಡಿ ಆಚೆ ಇದ್ದ ಹುಲ್ಲು ಗಾವಲಿನಲ್ಲಿ ಹಸಿರಾದ ಗರಿಕೆ ಹುಲ್ಲು ಪುರುಚಲುಗಿಡ ಇದ್ದಿದ್ದನ್ನು ಕಂಡು ಅದೆಲ್ಲವನ್ನು ಚಪ್ಪರಿಸಿಕೊಂಡು ತಿನ್ನುತ್ತಾ ಇತ್ತಂತೆ. ಹಠಾತ್ತಾಗಿ ಭಾರಿ ಮಳೆ ಬಂತಂತೆ ಈಗ ಏನು ಮಾಡೋದಪ್ಪಾ ಛತ್ರಿ ಕೂಡ ಇಲ್ಲ, ಮಳೆ ಅಂಗಿ ಮೊದಲೇ ಇಲ್ಲ. ಎಂದು ಯೋಚನೆ ಮಾಡಿತಂತೆ. ಹತ್ತಿರಲೇ ಮಾರಿಗುಡಿ ಕಾಣಿಸಿತಂತೆ. ಝಟ್ಟಂತ ಗುಡಿ ಒಳಕ್ಕೆ ಹೋಗಿ ಬಾಗಿಲು ಹಾಕಿ ಕೊಂಡಿತಂತೆ

ಆ ಊರ ಮಾರಿ ಗುಡಿ ಎಲ್ಲಾ ಊರಿನ ಮಾರಿ ಗುಡಿಗಳ ತರಹ ಊರ ಅಂಚಿನಲ್ಲಿತ್ತಂತೆ. ಒಂದಂಕಣದ ಗಿಡ್ಡಾನೆ ಗುಡಿ. ಕಾಡುಮರದ ಬಿರುಕುಬಿಟ್ಟ ಬಾಗಿಲು. ಹಿಂದಿನ ಗೋಡೆಯ ಹತ್ತಿರ ಒಂದು ಕಲ್ಲುಗುಂಡು ದೇವತೆ. ಎದುರಿಗೆ ಒಂದು ಹಣತೆ. ಬಲಿಕೊಡುಕ್ಕೆ ಅಂತ ದೇವತೆ ಮುಂದೆ ಒಂದು ಭರ್ಜರಿ ಕವೆಗೋಲು.

ಹೋತ ಸುತ್ತಲೂ ನೋಡಿತು. ಪಾಪ ! ಅದಕ್ಕೇನು ಗೊತ್ತು ? ಮುಂದೆ ಅದರ ಮಾಲೆ ಹಾಕಿದ ಕುತ್ತಿಗೇನ ಆ ಕವೆ ಗೋಲಿನಲ್ಲಿ ಇರಿಸಿ ಬಲಿ ಕೊಡ್ತಾರೆ ಅಂತ ! ಮಳೆ ಬಂದಾಗ ನೆರವಾಯಿತು ಈ ಗುಡಿ ಅಂತ ಸಂತೋಷಪಟ್ಟುಕೊಂಡು ಮೆಲ್ಲಗೆ ಗಡ್ಡವನ್ನು ನೀವಿಕೊಂಡಿತಂತೆ. ಮೈಯ್ಯನ್ನೆಲ್ಲಾ ಒಂದು ಸರ್ತಿ ಝಾಡಿಸಿ ಬೆಚ್ಚಗೆ ಆಗಲು ಪ್ರಯತ್ನಿಸಿತಂತೆ.

ಹೋತದ ಮೈವಾಸನೆ ಹೇಗಿರುತ್ತೆ, ಎಷ್ಟುದೂರ ಪಸರಿಸುತ್ತೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯಾನೇ. ಹಳೇ ದೇವಸ್ಥಾನಗಳ ಗಬ್ಬುಟು ವಾಸನೆಯನ್ನು

ತೀವ್ರವಾಗಿ ಮಾರಿದ ಆ ಹೋತದ ವಾಸನೆ ಗುಡಿಯ ಬಾಗಿಲ ಕಂಡಿಯಿಂದ ಬಲು ದೂರ ಕಾಡಿನಲ್ಲಿ, ಮಳೆ ಗಾಳಿಯ ಜತೆಗೆ ಹರಡಿತಂತೆ.

ಕಾಡಿನಲ್ಲಿ ಹಸಿದು ನಡುಗುತ್ತಾ, ಒಂದು ಹುಲಿ ಪೊದೆಯಲ್ಲಿ ಬಿದ್ದುಕೊಂಡಿತ್ತಂತೆ ವಾಸನೆ ಅದರ ಮೂಗಿಗೆ ಬಡಿದಾಗ " ಇದೇನು ? ಅಡಿಗೆ ಮನೆ ವಾಸನೆ ಬರ್‍ತಾ ಇದೆ " ಎಂದು ಎದ್ದು ವಾಸನೆಯ ಜಾಡನ್ನೇ ಹಿಡಿದು ಮಾರಿಗುಡಿಯ ಹತ್ತಿರಕ್ಕೆ ಬಂದಿತಂತೆ.

ಮಾರಿಗುಡಿಯ ಬಾಗಿಲು ಹಾಕಿದೆ ! ಒಳಗಿಂದ ಘಮಘಮ ಊಟದ ವಾಸನೆ ಬರುತ್ತಿದೆ. ಹಸಿವೂ ಆಗಿದೆ ಹುಲಿಗೆ. ಬಾಗಿಲು ತಟ್ಟಿತಂತೆ.

" ಯಾರು ? ಒಳಗೆ, ಬಾಗಿಲು ತೆಗೀರಿ " ಎಂದು ಘರ್ಜಿಸಿತಂತೆ.

ಬೇಕಾಬಿಟ್ಟಿ ಬೆಳೆದ ಹೋತ. ಪೇಟೇಲಿ ಬೆಳೆದ ಹೋತ. ಬುದ್ಧಿ ಉಪ ಯೋಗಿಸಿತು. " ಅಮ್ಮಾ ಮಾರೀದೇವಿ ! ಬುದ್ಧಿ ಕೊಡು " ಅಂತ ಬೇಡಿಕೊಂಡಿತು ನಂತರ ಬಾಗಿಲ ಕಂಡಿ ಹತ್ತಿರ ಬಂದು.

" ಯಾರಾದರೇನು ನಾನು ? ಏನು ಬೇಕಾಗಿತ್ತು " ಎಂದಿತು. ಕೊಬ್ಬಿದ ಹೋತ ; ಗಂಟಲು ದೊಡ್ಡದು. ಸ್ವಲ್ಪ ಬಿರುಸಾಗಿಯೂ ಇತ್ತು.

ಹುಲಿಗೆ ಪರಿಚಯವಿದ್ದ ಯಾವ ಪ್ರಾಣಿಗೂ ಈ ತರಹ ಗಂಟಲಿರ್‍ತಿಲ್ಲ ಸ್ವಲ್ಪ ತಬ್ಬಿಬ್ಬಾಯಿತು. ವಿನಯದಿಂದ ಆಮೇಲೆ ಕೇಳಿತು.

" ಯಾರಯ್ಯಾ ? ಮಾರಾಯ, ಒಳಗಿರೋದು " ಎಂದು.

" ಯಾರಾದರೇನಯ್ಯ ನಾನೊಂದು ಬಡ ಜಂತು. ನನ್ನ ಜತೆಯವರ ಕೂಡ ಹಣದ ವಿಷಯದಲ್ಲಿ ಮನಸ್ತಾಪ ಬಂದಾಗ ಇಲ್ಲಿಗೆ ತಲೆಮರೆಸಿಕೊಂಡು ಓಡಿ ಬಂದೆ. ಅಟ್ಟಿಸಿಕೊಂಡು ಅವರು ಬಂದರೋ ಎನ್ನಿಸಿತು." ಎಂದಿತಂತೆ ಹೋತ.

ಹಣ ಛಪಾವಣೆಮಾಡಿ ಬಂದ ಜಂತು ಜಾಣನಿರಬೇಕು ನಾನು ಹುಷಾರಾಗಿ ರೋದು ವಾಸಿ ಅಂತ ಹುಲಿ ಮರ್ಯಾದೆಯಿಂದ,

" ವಂದನೆಗಳು, ಮಹಾಸ್ವಾಮಿ. ತಮ್ಮ ಪರಿಚಯ ? " ಎಂದು ಕೇಳಿತಂತೆ " ಬಡವನ ಪರಿಚಯ ಯಾಕಪ್ಪಾ ! ಎಂಟು ತೋಳಗಳನ್ನು ತಿಂದ ನನ್ನ ಹಲ್ಲುಗಳನ್ನು ನೋಡು ಎಂದಿತಂತೆ. ಬಾಗಿಲ ಕಂಡಿಯಲ್ಲಿ ತನ್ನ ಗೊರಸುಗಳನ್ನು ತೋರಿಸಿತಂತೆ.

ಇಷ್ಟು ದೊಡ್ಡ ಹಲ್ಲುಗಳಿರುವ ಈ ಘೋರ ಜಂತು ಯಾವುದಪ್ಪಾ ಎಂದು ಹುಲಿ ಆಶ್ಚರ್ಯಗೊಂಡು ನೋಡುತ್ತಾ ಇತ್ತಂತೆ.

" ನನ್ನ ಮೀಸೆಯನ್ನು ನೋಡಪ್ಪಾ " ಎಂದು ಗಡ್ಡವನ್ನು ಬಾಗಿಲ ಕಂಡಿಯಲ್ಲಿ ತೋರಿಸಿತಂತೆ.

ಇಷ್ಟು ಭಾರಿ ಮೀಸೆ ಇರುವ ರೌಡಿ ಗಂಡು ಜಂತುವನ್ನು ಕಂಡಿದ್ದೇ ಇಲ್ಲವಲ್ಲ ಅಂತ ಹುಲಿ ಬೆದರಿತಂತೆ.

4

" ಎಂಟು ಹುಲಿಗಳನ್ನು ಕಿತ್ತುತಿಂದ ಈ ಉಗುರುಗಳನ್ನು ನೋಡು " ಎಂದು ತನ್ನ ಕೊಂಬುಗಳನ್ನು ಬಾಗಿಲ ಕಂಡಿಯಲ್ಲಿ ತೋರಿಸಿತಂತೆ.

" ಈ ಉಗುರುಗಳಿಗೆ ನನ್ನ ಮೈ ಸಿಕ್ಕಿದರೆ ಹೇಗಪ್ಪಾ " ಎಂದು ಹುಲಿ ಚಕಿತ ಗೊಂಡಿತಂತೆ.

ಈ ರೀತಿ ಪ್ರಸಾರ ಭಾಷಣವನ್ನು ಮಾಡಿದಮೇಲೆ ಹೋತ ನನ್ನ ಪರಿಚಯ ಸಾಕಷ್ಟು ಆಯಿತೇ ! ಈಗ ಸುತ್ತಲೂ ನೋಡು ನನ್ನ ದಾಯಾದಿಗಳ್ಯಾರಾದರೂ ಇತ್ತ ಬರುತ್ತಿದ್ದಾರೆಯೋ ಎಂದು ಒಗ್ಗರಣೆ ಹಾಕಿತಂತೆ.

ಹೆದರಿತು ಹುಲಿ. ಹೆದರಿ ಓಡಿ ಹೋಯಿತು ಹುಲಿ. ಮಳೆ ನಿಂತಿತು. ಆಗ ಹೋತ ಬಾಗಿಲನ್ನು ಕೊಂಬಿನಿಂದ ತೆಗೆದು ಊರಿಗೆ ಓಡಿ ಹೋಯಿತು.

* * * *

ಮಾರಮ್ಮ ಆಗ ಗುಡಿಯಲ್ಲಿ ಗುಂಡಕಲ್ಲು ನಕ್ಕ ಹಾಗೆ ನಕ್ಕಳಂತೆ. " ಈ ಹೋತದ ಸಂತೋಷ ನೋಡು, ಹುಲಿ ಬಾಯಿಂದ ತಪ್ಪಿಸಿಕೊಂಡೆ ಎಂದು ಹಿಗ್ಗಿತು. ಮುಂದೆ ನನ್ನ ಬಾಯಿಗೆ ಬೀಳುತ್ತೆ ಅನ್ನೋ ಸತ್ಯದ ಅರಿವೇ ಇಲ್ಲ " ಎಂದು ನಕ್ಕಳಂತೆ.

ಎಂದು ನವ್ವ ಅಡುಗೂಲಜ್ಜಿ ಹೋತ ಹುಲಿಯ ಕತೆಯನ್ನು ಹೇಳಿದಳಂತೆ.

ಎಂಟು ರೂಪಾಯಿನ ಋಣ ಕೊಂಡೆ
ಹತ್ತರ ಹತ್ತಿರ ಎಂದರು
ಹೀಗೆ ನಡೆದರೆ ನೀ ಮುಂದೆ
ಕರಟವೇ ಖಂಡಿತ ಮಕ್ಕಳಿಗೆಂದರು.

ಎಂಟು ರೂಪಾಯಿನ ಟೈ ತಂದರು
ಏನನ್ಯಾಯ ಅಂತಂದೆ
ಐದಕ್ಕಿಂತ ತುಸುತುಸು ಹೆಚ್ಚು
ಅಷ್ಟಕ್ಕೇನೆ ಕೋಪವೇ ಎಂದರು.

* * * *

ನೀವೂ ಹಾಗೇ ಮಾಡಿ

ಹಾರೋ ಹಳ್ಳೀಲಿ ಗುಲ್ಲೋ ಗುಲ್ಲು. ನಮ್ಮ ಸುಂದರೂಗೆ 5000 ರೂ. ಕೊಟ್ಟು ಅವನ್ಹತ್ರ ಇದ್ದ ಹಳೇ ಚರಿತ್ರಾರ್ಹವಾದ ಸಾಮಾನುಗಳನ್ನೆಲ್ಲಾ ತೊಗೊಂಡ್ರೂಂತ.

ಎಲಾ ಎಲಾ, ನಮ್ಮ ಸುಂದ್ರೂಗೆ ಇದ್ಯಾಗ್ ಬಂತೂ ಅಂತ ನನಗೆ ಆಶ್ಚರ್ಯ ವಾಯ್ತು.

ಹೋಗಲಿ ಅದೇನು ಸಾಮಾನುಗಳು ನೋಡೋಣ ಅಂತ ನಮ್ಮ ಪ್ರೇಮನ್ನೂ ಕರ್ಕೊಂಡು ಹೋದೆ.

ಆಗಲೇ ಕಾಗದದ ಚೂರುಗಳನ್ನೆಲ್ಲಾ ಆ ಇಷ್ಟನೇ ಶತಮಾನದ್ದು, ಅದು ಅವನ ಕಾಲದ್ದು, ಇದು ಹಾಗೆ, ಅದು ಹೀಗೆ ಲೊಂಗು ಲೊಟ್ಟೆ ಎಲ್ಲಾ ಶೀರ್ಷಿಕೆ ಬರೆದಿದ್ದರು.

ನಮ್ಮ ಪ್ರೇಮ "ಇದೇನ್ರಿ, ಹಂಚಿ ಪ್ರುಕ್ರೆ, ತಗಡಿನ ಚೂರು, ಗೋಲಿ ಚೂರು ಇದಕ್ಕೆಲ್ಲಾ ದುಡ್ಡು ಕೊಟ್ಟುಕೊಂಡು ಕೊಂಡರೇನ್ರೀ" ಅಂತ ಜೋರಾಗಿ ನಗುಕ್ಕೆ ಶುರು ಮಾಡಿದ್ಳು. "ನಗಬೇಡ್ವೆ ಸುಂದ್ರು ತಪ್ಪು ತಿಳ್ಕೋತಾನೇ ಅಂತ ಮಾತು ಹಾರಿಸಿ ಎಲ್ಲದನ್ನೂ ಸುಮ್ಮನೇ ನೋಡಿದೆವು.

ಮಧ್ಯಾಹ್ನ ಕಾಫೀ ಕುಡೀತಾ ಸುಂದ್ರೂನೇ ಕೇಳ್ದೆ "ಈ ಪ್ರಾಚ್ಯ ಸಾಮಾನೆಲ್ಲಾ ಹೇಗೆ ಬಂತಯ್ಯಾ" ಅಂತ ಅದಕ್ಕವನು ಹೇಳ್ದ :

"ನನ್ನ ಹೆಂಡ್ತಿಗೆ ನಾನು ಮೊದಲು ಹೇಳಿದ್ದು ಇಷ್ಟೆ. ಕಾಲ ಕೆಟ್ಟಿದೆ.. ಎಲ್ಲಾ ತರಹ ದರೋಡೇನೂ ನಡೆಸ್ತಿದಾರೆ ಈ ಬೆಂಗಳೂರಲ್ಲಿ. ಮನೆ ಹತ್ರ ಹಳೇ ಪಾಗೀನ ಕಂಬಿ, ಹಳೇ ಸೀಸೆ, ಬಾಟ್ಲಿ, ಪೇಪರ್ ರದ್ದಿಯೇ, ಚಪ್ಲಿ ತೊಗೋಳೋರ್‍ಯಾರನ್ನೂ ಸೇರಿಸಬೇಡ ಅಂತ ಹತ್ತು ವರ್ಷದ ಹಿಂದೆ ಹೇಳಿದ್ದೆ. ನನ್ನ ಸಹಧರ್ಮಿಣಿ ಕಷ್ಟಪಟ್ಟು ಆಚರಿಸಿದಳು ಆ ವ್ರತಾನ. ಸರಿ ನಮ್ಮನೇಲಿ ಶೇಖರವಾಯ್ತು ಹಳೇ ಸಾಮಾನುಗಳು. ಅದರ ಜೊತೇಲಿ ನಮ್ಮ ಕುಮಾರನೂ ಇಟ್ಟ ಅವನ ಸಾಮಾನುಗಳನ್ನು. ಅವನೇ ಬರೆದ ಮಾಡರ್ನ್ ಆರ್ಟ್ ಚಿತ್ರಗಳು ಹಳೇ ಶಿಲಾಯುಗದವರು ಬರೆದಂತೆ. ಅವನ ಹಿಂದಿ ಪಾಠಗಳು, ಹಂಚ ಪ್ರುತ್ರೆ, ತಗಡಿನ ಚೂರು, ಗಾಜಿನ ಚೂರು, ಸೋಡಬಾಟ್ಲಿ ಗೋಲಿ, ಮುಂರುಕು ಪೆಟ್ಟಿಗೆ, ಹಳೇ ಬಟ್ಟೆ, ಬಣ್ಣ ಬಣ್ಣದ ದಟ್ಟಿ, ಹಳೇ ಕಾಲದ

ಬೋಟಾ ಸಾಣ್ಕ, ಹಳೇ ಚಪ್ಪಲಿ, ಮುರುಕಲು ಗೊಂಬೆ ವಗ್ಯೆರೆ ವಗ್ಯೆರೆ ಕೂಡಿತು. ಒಂದು ದಿನ ನನ್ನ ಗೆಳೆಯ ನಾಣಿ ತನ್ನ ಪರದೇಶಿ ಗೆಳೆಯ ಜಾರ್ಜ್‌ನ ಕರಕೊಂಡು ಬಂದ. ಅವನು ಬರೋ ಹೊತ್ಗೆ ನಮ್ಮ ಹುಡುಗ ಹಳೇ ಸಾಮಾನುಗಳನ್ನೆಲ್ಲಾ ಹರಡ್ಕೊಂದಿದ್ದಕ್ಕೂ ಸರಿಯಾಗಿತ್ತು. ಜಾರ್ಜ್ ಬಂದವನೇ ಹಂಚಿ ಪುಕ್ರಿ ತೊಗೊಂಡು ವಂಡರ್‌ಫುಲ್ ಅಂದ ! ಅವನ್ಕಣ್ಣಿಗೇನಾಗಿತ್ತೊ ನಂಗೊತ್ತಿಲ್ಲ. ಒಡೆದ ಸೋಡ್ವಾ ಬಾಟ್ಲಿ ಗೋಲೀ ನೋಡಿ ಎಕ್ಸೆಲಂಟ್ ಅನ್ನುತ್ತಾ ನಮ್ಮ ಕುಮಾರನ ಹತ್ರ ಇದ್ದದ್ದನ್ನೆಲ್ಲಾ ಕಸ್ಕೊಂಡ. ಇವನ್ನೆಲ್ಲಿ ಕ್ರ್ಯಾಕ್ ಬಂದ ಅಂತ ನನ್ನ ತಲೆ ಕೆರ್ಕೊಳ್ತಿದ್ದೆ.

ಆಗ ಜಾರ್ಜ್ ಹೇಳ್ದ : "ನೋಡೀ ಸಾರ್, ಈ ಸಾಮಾನುಗಳನ್ನೆಲ್ಲಾ ನನಗೇ ಕೊಡಿ 5000 ರೂಪಾಯಿ ಕೊಡ್ತೀನಿ. ಇಂಡಿಯಾದಲ್ಲಿ ಸಿಕ್ಕಿದ್ದು ಹಳೇ ಶತಮಾನ ದೋವು ಅಂತ ನಮ್ಮೂರಿಗೆ ತೊಗೊಂಡ್ಹೋಗ್ತೀನಿ" ಅಂತ ಹೇಳೀಬಿಟ್ಟ, ಅಲ್ಲೇ ನಿಂತಿದ್ದ ನನ್ನ ಅರ್ಧಾಂಗಿ ನನ್ನ ಮೊಳಕ್ಕೆ ತಿವೀತಾ 'ಹ್ಕೂನ್ರಿ ಹ್ಕೂನ್ರಿ' ಅಂತ ಕುಮ್ಮಕ್ ಕೊಟ್ಳು ಸರಿ ಹಳೇ ಸಾಮಾನುಗಳನ್ನೆಲ್ಲಾ ಜಾರ್ಜ್‌ಗೆ ಕೊಟ್ಟು 5000 ರೂ. ಇಸ್ಕೊಂಡೆ. ಅದೃಷ್ಟ ಬದ್ದರೆ ಹೀಗೆ ಬರಬೇಕಮ್ಮ ಎನ್ನುತ್ತಾ ಸುಂದರು ಕಾಫಿ ಹೀರ್ದ.

ಅದೇ ರಾತ್ರಿ ನಮ್ಮ ಪ್ರೇಮುಂಗೂ ಹೇಳ್ದೆ : "ಹಳೇ ಪಾಗೀನ ಕಂಬಿ, ಹಳೇ ಸೀಸೆ, ಪೇಪರ್, ಬಾಟ್ಲಿ, ಚಪ್ಪಲಿ. ಪುಸ್ತಕ ಅಂತ ಬೀದೀಮೇಲೆ ಕೂಗೋರನ್ನ ಮನೆ ಹತ್ರ ಸೇರಿಸಬೇಡ. ಇದಕ್ಕೆಲ್ಲಾ ಒಳ್ಳೆ ಫಾರಿನ್ ವ್ಯಾಲ್ಯು ಇದೆ" ಅಂತ.

ಒಳ್ಳೆ ಬೆಲೆ ಅಲ್ವೆ ! ನೀವೂ ಹಾಗೇ ಮಾಡೀಂದ್ರೆ. ಅದೃಷ್ಟ ಇವತ್ತಲ್ಲ ನಾಳೆ ಬರ್ಮುತ್ತೆ ಕಣ್ರೀಃಃ.

—ಹಾ. ಮೈ. ಸೂರಿ.

ರಾಷ್ಟ್ರೀಯತೆಯ ಅಂತರ್ಧಾನ ವಾದಾಗ ಅಂತ ರಾಷ್ಟ್ರೀಯತೆಯ ಉದ್ಭವ ಎಂದೊಬ್ಬ ಪಂಡಿತರ ಅಂಬೋಣ.

—ಸ್ವಾಮಿ ಮನೆ ಭದ್ರಮಾಡಿಕೊಂಡು ಆ ಮೇಲೆ ನೆರೆಹೊರ್ಕೆ !!

* * * *

ಮೈ ಬಳಲಿದೆ ಎಂದು ಆಚಾರ್ಯರು ಅಂದರೆ

—ಪರಂಧಾಮಾಶ್ರಮದಲ್ಲಿ ವಿಶ್ರಾಂತಿಗೆ ಕರೆದೊಯ್ದರಂತೆ.

* * * *

ಶ್ರೀ ಶಾಸ್ತ್ರಿಗಳ ಗಮನಕ್ಕೆ

ಮಂಚಗಲ್ ಕುಪ್ಪೆಯಿಂದ ಅಜ್ಜಿ ಬಂದಿದ್ದಳು. ಬಚ್ಚಲು ಮನೆಯಲ್ಲಿ ಜಾರಿ ಬಿದ್ದು ಮೊಣಕಾಲಿನ ಮೂಳೆ ಮುರಿದುಕೊಂಡಿದ್ದಳು. ಅಜ್ಜೀನ ಗಾಡೀಲಿ ಹುಲ್ಲಿನ ಹಾಸಿಗೆಮೇಲೆ ಮಲಗಿಸಿಕೊಂಡು ತಂದಿದ್ದರು. ನಿಮಿಷಕ್ಕೆ ನೂರು ಬಾರಿದಢದಢ ಅಂತ ಪ್ರಾಯದ ಹುಡುಗಿ ಹಾಗೆ ಆ ಕಡೆಯಿಂದ ಈ ಕಡೇಗೆ, ಈ ಕಡೆಯಿಂದ ಆ ಕಡೇಗೆ ನಡೆಯುತ್ತಿದ್ದ ಮುದಿಕಿ ಕಾಲು ಮುರಿದುಕೊಂಡು ಮಲಗಿದರೆ ಕೇಳಬೇಕೆ, ಆಕೆ ಸಂಕಟಾನ! ಅಷ್ಟು ಸಂಕಾಟಾನೂ ಮುದಿಕಿ ಮಾತಾಡೇ ಪರಿಹರಿಸಿಕೊಳ್ಳುತ್ತಿದ್ದಳು. ಊರಿನವರ ಕುಲಗೋತ್ರಗಳಿಗೆಲ್ಲ ಮರ್ಯಾದೆಮಾಡುತ್ತಿದ್ದಳು. ಬೇಂದ್ರೆ ನಗೆಹಾಡು ಕಟ್ಟಿಲ್ಲವೆ? "ನಾಡ ಸಂರಕ್ಷಣೆಗೆ ತೋಪು ಇಲ್ಲದಿರಲು ಊರಿಗೊಂದಿರಬೇಕು ಬಾಯ್ಬಡಕ ಮುದಿಕಿ". ಪ್ಲಾಸ್ಟರ್ ಹಾಕಿ ಮಲಗಿಸಿದರೆ ಅಜ್ಜಿ ತಣ್ಣಗಾಗುತ್ತಾಳೆ, ಕಾಲೂ ಸರಿಯಾಗುತ್ತೆ ಎಂದೆ. ಮುದಿಕೀಗೆ ಸ್ವಲ್ಪ ರೆಸ್ಟ್ ಸಿಗುತ್ತೆ ಆರೋಗ್ಯಾನೂ ನೆಟ್ಟಗಾಗುತ್ತೆ ಟಾನಿಕ್ ಇಲ್ಲದೇನೆ ಎಂದಳು ಕಿರಿ ಮಗಳು. ಅಜ್ಜೀನ ಆಸ್ಪತ್ರೇಗೆ ದಾಖಲು ಮಾಡಿದರು. ಲಂಗ ಹಾಕಿ ಕಾಲಿಗೆ ದೆಬ್ಬೆ ಕಟ್ಟಿ ಮಂಚದಮೇಲೆ ಬಿಗಿದು ಮಲಗಿಸಿದರು.

ಕಳ್ಳನಿಂಗನಕೊಪ್ಪಲಿನಿಂದ ಚಿಕ್ಕಣ್ಣ ಬಂದಿದ್ದ. ಅವನ ತಮ್ಮ ಹನುಮ, ನಿಜಗುಣಯ್ಯನ ಮನೆಯಲ್ಲಿ ಒಂದು ಹಂಡೆ ಕದ್ದನೆಂದು ಪೋಲೀಸನವರು ಹಿಡಿದು ಕೊಂಡು ಬಂದಿದ್ದಾರೆಂದು ಸಮಾಚಾರ ಹೇಳಿದ. ನೀನು ನೋಡಿದರೆ ಎಷ್ಟೊಂದು ಮರ್ಯಾದಸ್ಥ. ನಿನಗೆ ಕೆಟ್ಟ ಹೆಸರು ತಂದನಲ್ಲ ನಿನ್ನ ತಮ್ಮ ಅಂತ ಚಿಕ್ಕಣ್ಣನಿಗೆ ಸಮಾಧಾನ ಹೇಳಿ ಹೆದರಬೇಡವೆಂದು ಧೈರ್ಯ ಹೇಳಿದೆ. "ಪೋಲಿ ಹೈದ ಮಾಡಿದ್ದರೂ ಮಾಡಿರಬಹುದು" ಜೈಲಿನಲ್ಲಿ ಎರಡು ದಿನ ಇದ್ದರೆ ಬುದ್ಧಿ ಬರುತ್ತೆ" ಎಂದ 'ಎಲಾ ಎಲಾ ಜಾಣ ಚಿಕ್ಕಣ್ಣ' ಅಂತ ಮನಸ್ಸಿನಲ್ಲೇ ಅಂದುಕೊಂಡು ಬರುವ ಫೀಜಿಗೆ ಎಲ್ಲಿ ಕಲ್ಲು ಬೀಳುತ್ತೋ ಅಂತ ಲೆಕ್ಕಾಚಾರ ಹಾಕಿ "ಎಂಥಾ ಮಾತಾಡ್ತೀಯ ಚಿಕ್ಕಣ್ಣ. ತಮ್ಮನ್ನ ಜೈಲಿಗೆ ಕಳಿಸುವುದೆ. ನಾನು ಪೇಟೇಲಿ ಲಾಯರಾಗಿದ್ದುಕೊಂಡು ನಿನ್ನ ತಮ್ಮನ್ನ ಜೈಲಿಗೆ ಕಳಿಸಿದರೆ ಸಾರ್ಥಕವಾಯ್ತುಬಿಡು" ಎಂದು ಹೇಳುತ್ತಾ ಎರಡು ಭಾರಿ ಪುಸ್ತಕಗಳನ್ನು ಬೀರುವಿನಿಂದ ತೆಗೆದು ಟೇಬಲ್ಲಿನಮೇಲೆ ಕುಕ್ಕಿದೆ! ಅದೇನು

ಮಾಡುತ್ತೀರೋ ಮಾಡಿ ಅಂತ ಚಿಕ್ಕಣ್ಣ ಜೇಬಿಗೆ ಕೈ ಹಾಕಿದ. ಹನುಮನನ್ನು ಪೋಲೀಸನವರು ಹಿಡಿದುಕೊಂಡು ಬಂದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. "ಲೇ ಹನುಮ ನಿಜಗುಣಯ್ಯನ ಮನೇಲಿ ಹಂಡೇನ ಹೊಡಕೊಂಡು ಹೋದೆ ನೀನು ಅಂತ ಪೋಲೀಸನವರು ಹೇಳ್ತಾರೆ. ಅದಕ್ಕೆ ನೀನು ಏನು ಹೇಳ್ತೀಯೋ" ಅಂತ ಮ್ಯಾಜಿಸ್ಟ್ರೇಟರು ಕೇಳಿದರು. ಹನುಮ ಕೈ ಮುಗಿಯುತ್ತಾ "ನಿಜಗುಣಯ್ಯನಿಗೆ ಹೆಂಡತಿ ಇಲ್ಲ ಸಾಹೇಬ್ರು, ಅದಕ್ಕೆ ಹಂಡೇನೇ ಹೊಡೆದುಕೊಂಡು ಹೋದೆ" ಎಂದ. ಮ್ಯಾಜಿಸ್ಟ್ರೇಟರು ತ್ಯು ! ತ್ಯು ! ಎಂದರು 'ಸೀತಾಪಹರಣಕ್ಕೆ ಕಲಿಯುಗದಲ್ಲಿ ಹನುಮಂತನೇ ನಿಂತಿದ್ದಾನಲ್ಲಪ್ಪ' ಅಂತ. 'ಎಲಾ ಕೊರವ, ನಂಗೂ ಕೈ ಕೊಟ್ಟನಲ್ಲ ಅಂತ ಕೈ ಹಿಸಿಕಿಕೊಂಡೆ ನಾನೂ. ಹನುಮನಿಗೆ ಒಂದು ತಿಂಗಳು ಶಿಕ್ಷೆ ವಿಧಿಸಿದರು. ಜೈಲಿಗೆ ಹಾಕಿದರು.

ಒಂದು ತಿಂಗಳ ನಂತರ ಮಂಚಗಲ್ ಕುಪ್ಪೆ ಅಜ್ಜಿ ಆಸ್ಪತ್ರೆಯಿಂದ ನಡೆದು ಕೊಂಡೇ ಮನೇಗೆ ಬಂದಳು. ಮುದಿಕಿ ಬೊಚ್ಚ ಬಾಯಿಬಿಡುತ್ತಾ ನೆಗೆದಾಡಲು ಹವಣಿಸುವುದನ್ನು ನೋಡಿದರೆ ಇನ್ನೊಂದು ಕಾಲೂ ಮುರಿಯಲಿ ಅನ್ನೋ ಆಶೆ ಅವಳ ಮನಸ್ಸಿನಲ್ಲಿದೆಯೇನೋ ಎಂದು ನೋಡಿದವರಿಗೆ ಅನ್ನಿಸುತ್ತಿತ್ತು.

ಏನ್, ಅಜ್ಜಿ.. ಆಸ್ಪತ್ರೆವಾಸ, ದೇವರು ಕಷ್ಟಕೊಟ್ಟನಲ್ಲವೆ ಈ ಇಳಿವಯಸ್ಸಿನಲ್ಲಿ" ಎಂದೆ. "ಅಯ್ಯೊ ಮಂಕೆ, ಕಷ್ಟವೇನಿತ್ತೋ ಆಸ್ಪತ್ರೇಲಿ ; ಹಾಯಾಗಿ ಮಲಗಿದ್ದೆ. ಎರಡೂ ಹೊತ್ತು ಲಕ್ಷಣವಾಗಿ ಅಷ್ಟೋ ಇಷ್ಟೋ ಹಾಕುತ್ತಿದ್ದರು.' ಯಾವುದಕ್ಕೂ ತಾಪತ್ರಯ ಇರಲಿಲ್ಲ ಹುಡಗ ಡಾಕ್ಟರುಗಳೂ, ಹುಡಿಗಿ ಡಾಕ್ಟರುಗಳು ಯಾವಾಗಲೂ ಕಿಲ ಕಿಲ ಅಂತ ನಗೆದಾಡುತ್ತಿದ್ದವು. ಕಣ್ಣಿಗೆ ಮೊಮ್ಮಕ್ಕಳನ್ನು ಕಂಡ ಹಾಗೇ ಆಗ್ತಿತ್ತು. ಆಚೆಕಡೆ ಅಕ್ಕೀಗೆ ನಿಂತುಕೊಳ್ಳೊ ಕ್ಯೂಗಳನ್ನ ನೋಡಿದರೆ ಆಸ್ಪತ್ರೆ ವಾಸವೇ ಸುಖ ವಲ್ಲವೇನಪ್ಪ. ಆಡಳಿತ ವೈನವಾಗಿನೋಡಿಕೊಳ್ತಾರೆ. ಎಲ್ಲಾದಕ್ಕೂ ಆಸ್ಪತ್ರೇಲಿ ಸಿಬ್ಬಂದಿ ರೂಲ್ಸು ಇದೆಯಪ್ಪ ಎಂದಳು. 'ಭಲಾರೆ ಮುದಿಕಿ ಅಜ್ಜಿ ಅನ್ನಿಸಿತು ಹಾಗೂ ಇನ್ನೊಂದುವಾರದಲ್ಲೇ ಇನ್ನೊಂದು ಕಾಲು ಮುರಿದುಕೊಂಡು ಈಕೆ ಬರೋದು ಖಂಡಿತ ಅಂತಾನೂ ಮನಸ್ಸಿಗೆ ತೋಚಿತು !

ತಿಂಗಳ ಶಿಕ್ಷೆ ಅನುಭವಿಸಿ ಹನುಮ ರೇಷ್ಮೆ ವಸ್ತ್ರ ಹೊದ್ದುಕೊಂಡು ಚಿಗರು ಮೀಸೆಮೇಲೆ ಕೈ ಆಡಿಸುತ್ತಾ ಖುಶಿಯಿಂದ ಅಡ್ಡಾಡಿಕೊಂಡು ಬಂದ. ಜೈಲಿನಲ್ಲಿ ಹಳ್ಳಿ ಹೈದ ಸೊರಗಿದ್ದಾನೆ ಅಂತ ನಾನು ಅಂದುಕೊಂಡಿದ್ದೆ. ತಲೆಗೆಸ್ನಾನಮಾಡಿ ದೇವರಿಗೆ ಅಡ್ಡ ಬಿದ್ದ ಒಳ್ಳೆ ಬುದ್ಧೀನ ಕೇಳ್ಕೊಳ್ಳೋ ಹನುಮ ಅಂತ ಅಂದರೆ "ಆ ನನ್ನಮಗ ನಿಜಗುಣಯ್ಯನ ಮನೇಲಿ ಒಂದು ಪಾತ್ರೆ ಇಲ್ದಹಾಗೆ ಮಾಡ್ದೆ ಹೋದ್ರೆ ನಾನ್‌ಗಾನ ಕಳ್ಳನ ಕೊಪ್ಪಲಿನ ಹನುಮ ಅಲ್ಲ ಅಂತ ಮತ್ತೊಮ್ಮೆ ಮೀಸೇನ ಹುರಿ

ಮಾಡಿದ. 'ಅಲ್ಲೊ ಹನುಮ, ಜೈಲ್ ಅಂದರೆ ನಿನಗೆ ಹೆದರಿಕೆಯೇ ಇಲ್ಲ ಅಂತ ಕಾಣುತ್ತಲ್ಲ, ಮತ್ತೆ ಕಳಸ್ತಾರೆ ಜೋಕೆ' ಅಂತ ಎಚ್ಚರಿಕೆ ಹೇಳಿದೆ.

'ಷೋಕಾಗಿ ಹೋಗ್ತೀನಿ ರಾಯ್ರು, ಹಳ್ಳೀಲೇನಿದೆ? ಸುಡುಗಾಡು. ಷೋಕಾಗಿ ಹಿಟ್ಟು ಹಾಕ್ತ ಇದ್ರು. ಹಾಯಾಗಿತ್ತು ಒಂದು ತಿಂಗಳು. ಬ್ಲಾಕ್ ಮಾರ್ಕೆಟ್ಟಿನಲ್ಲಿ ರಾಗಿ ಕೊಂಡು ತಿನ್ನಾಕೆ ನನ್ನಲ್ಲಿ ರೊಕ್ಕ ಎಲ್ಲಿದೆ ರಾಯ್ರು ಕಳ್ಳತನ ಮಾಡಿದ್ರೆ ಹಣಾನೂ ಸಿಗುತ್ತೆ. ಹಿಟ್ಟೂ ಸಿಗುತ್ತೆ ಎಂದು ಹನುಮ! ' ಆಚೆಕಡೆ ಕ್ಯೂಲಿ ಸಾಯೋರ್‍ಗ್ಯಾರು ಹಾಯಾಗಿರುತ್ತೆ ಜೈಲು' ಎಂದ.

ಮಂಚಗಲ್ ಕುಪ್ಪೆ ಅಜ್ಜೀನೂ ಹೀಗೇ ಹೇಳಿದ್ದು. ಈ ಕಳ್ಳ ಹನುಮನೂ ಹಾಗೇ ಹೇಳ್ತಾನೆ. ಅಂದಮೇಲೆ ನಾನ್ಯಾಕೆ ಚೀಲ ಹಿಡ್ಕೊಂಡು ಸಾಯಲಿ ಈ ಕ್ಯೂಗಳಲ್ಲಿ! ಈ ಕಾಲಕ್ಕೆ ಆಸ್ಪತ್ರೆ, ಜೈಲೇ, ವಾಸಿ ಅಲ್ವೆ ವಾಸಮಾಡೋಕೆ?

ಅಂದಮೇಲೆ ಶ್ರೀ ಶಾಸ್ತ್ರಿಗಳೂ ಶ್ರೀ ಕಾಮರಾಜನಾಡರೂ ಸೇರಿ ದೇಶದ ಆಹಾರ ಪರಿಸ್ಥಿತಿಯನ್ನು ಏಕೆ ಸರಿಪಡಿಸಬಾರದು ಶೀಘ್ರವಾಗಿ? ಕಂಟ್ರೋಲುಗಳು ಏಕೆ? ರೇಷನ್ ಕಾರ್ಡುಗಳೇಕೆ? ಫುಡ್ ಇಲಾಖೆ ಯಾಕೆ? ಇಷ್ಟೊಂದು ಪೋಲೀಸು, ಕೋರ್ಟುಗಳು, ತುರ್ತು ಶಾಸನಗಳು ಯಾಕೆ? ಆಸ್ಪತ್ರೇಲಿ ಸಿದ್ಧವಾದ ಸಿಬ್ಬಂದಿ ಇದೆ! ಜೈಲಿನಲ್ಲೂ ಸಿದ್ಧವಾದ ಸಿಬ್ಬಂದಿ ಇದೆ. ಆಹಾರ ಸರಬರಾಜಿಗೆ ಎರಡೂ ಕಡೆ ಟೆಂಡರ್ ಕರೆದು ಕಂಟ್ರಾಕ್ಟ್ ಕೊಟ್ಟರೆ ಮುಗಿಯಿತು! ಕಂಟ್ರಾಕ್ಟರು ಹೂವಿನ ಸರ ಎತ್ತಿದ ಹಾಗೆ ನಗುನಗುತ್ತಾ ಕೆಲಸ ನಿರ್ವಹಿಸ್ತಾನು! ಅಂದರೆ ಹಾಗೆ ಮಾಡೋಕೆ ದೇಶದ ಅರ್ಧ ಜನ ಸಂಖ್ಯೇನ ಜೈಲಿಗೂ; ಇನ್ನರ್ಧ ಜನ ಸಂಖ್ಯೇನ ಆಸ್ಪತ್ರೇಗೂ ದಾಖಲುಮಾಡಬೇಕು ಅಷ್ಟೆ!

ಅರರೆ! ನನ್ನ ಪ್ಲಾನಿನಲ್ಲಿ ಎಲ್ಲೋ ಐಬಿರೋ ಹಾಗೆ ಕಾಣುತ್ತಲ್ಲ! ಸರ್ಕಾರ ಬಲವಂತವಾಗಿ ಇಲ್ಲಿ ಏನನ್ನೂ ಮಾಡುವಹಾಗಿಲ್ಲವಲ್ಲ. ಚೀಣವೋ ರಷ್ಯವೋ ಆಗಿದ್ದರೆ ಅವರು ಒಂದೇ ದಿನದಲ್ಲಿ ಸಮಸ್ಯೆಯನ್ನು ಬಿಡಿಸುತ್ತಿದ್ದರು. ನಮ್ಮದು ಪ್ರಜಾ ಪ್ರಭುತ್ವ! ಯಾರನ್ನೂ ಬಲವಂತವಾಗಿ ಜೈಲಿಗೂ, ಆಸ್ಪತ್ರೆಗೂ ಹಾಕಲು ಸಾಧ್ಯ ವಾಗುವುದಿಲ್ಲ. ಆದರೆ ಅದಕ್ಕೆ ಬದಲು ಜನಗಳೇ ಸ್ವಯಂ ಪ್ರೇರಿತರಾಗಿ ಜೈಲಿಗೂ, ಆಸ್ಪತ್ರೆಗೂ ದಾಖಲಾಗುವ ಹಾಗೆ ಸರ್ಕಾರ ಪರಿಸ್ಥಿತಿಯನ್ನು ಉಂಟುಮಾಡಿದರೆ ಸಾಕು! ಸರ್ಕಾರ ಇನ್ನೂ ಶೀಘ್ರವಾಗಿ ಹೀಗೇ ಮುನ್ನಡೆದರೆ ಸಮಸ್ಯೆ ತನ್ನಷ್ಟಕ್ಕೆ ತಾನೇ ಬಗೆಹರಿಯುತ್ತದಲ್ಲವೆ? ಶ್ರೀ ಶಾಸ್ತ್ರಿಗಳೂ, ಕಾಮರಾಜರೂ ಇದನ್ನು ಒಪ್ಪುತ್ತಾರೆಯೆ?

—ಹಾ. ರಾ.

(ಆಹಾರ) ಕಾವ್ಯ—ಮೀಮಾಂಸೆ

ಕಾರಿಕೆ ; **ಶಬ್ದಾರ್ಥೌ ಸಹಿತೌ ಕಾವ್ಯಂ**

ವೃತ್ತಿ : ಶಬ್ದ ಮತ್ತು ಅರ್ಥಗಳು ಒಂದುಗೂಡಿರುವುದೇ ಕಾವ್ಯ. ಆಹಾರವೆಂಬ ಹೆಸರೂ, ಅದಕ್ಕಾಗಿ ಅರ್ಥವನ್ನು ಎಂದರೆ ಹಣವನ್ನು ಒಂದುಗೂಡಿಸಿದರೆ ಅದೇ ಕಾವ್ಯ. ಆಹಾರ ಪದಾರ್ಥಗಳು ಇರುವುದು ಅನವಶ್ಯಕ.

ಕಾರಿಕೆ : **ರೀತಿ ರಾತ್ಮಾ ಕಾವ್ಯಸ್ಯ**

ವೃತ್ತಿ : ಬರಿಯ ಹೆಸರು ಮತ್ತು ಹಣಗಳು ಒಂದುಗೂಡಿಬಿಟ್ಟರೆ ಕಾವ್ಯವಾಗುವುದಿಲ್ಲವೆಂದು ಪೂರ್ವ ಪಕ್ಷದವರು ಆಕ್ಷೇಪಣೆಯನ್ನು ಎತ್ತಬಹುದು ಆದುದರಿಂದ ಕಾವ್ಯ (ಆಹಾರ) ದ ಆತ್ಮವು ಅದನ್ನು ಪಡೆಯುವ ರೀತಿಯಲ್ಲಿದೆ. (ಬೆಳೆಯುವುದು, ಕದಿಯುವುದು, ಬ್ಲಾಕ್ ಮಾರ್ಕೆಟ್ ಇತ್ಯಾದಿ)

ಕಾರಿಕೆ : **ಕಾವ್ಯಸ್ಯಾತ್ಮಾಧ್ವನಿಃ**

ವೃತ್ತಿ : ಬೆಳೆದು ಎಷ್ಟು ತಿಂದೇವು (ಆದುದರಿಂದ) ಬೇಡಿ ತಿನ್ನಬೇಕು. ತಿಂದರೆ ತಿನ್ನು ಬಿಟ್ಟರೆ ಬಿಡು ! ಇಲ್ಲಿ ಒಂದು ಶ್ಲೋಕವಿದೆ :

ಅಂತಿರ್ದ ನಿಂತಿರ್ದ ನೆಂತಿರ್ದನೆನಬೇಡ
ಕುಂತಿಯಾ ಸುತರು ತಿಂದುಣಲು ಮಿಕ್ಕವರು
ಎಂತಿರ್ದರೇನು ಸರ್ವಜ್ಞ

ಬ್ಲಾಕ್ ಮಾರ್ಕೆಟ್ ಎಂದು ಬಾಯಿ ಬಿಟ್ಟು ರೀತಿ ಪ್ರಸ್ಥಾನದವರು ಹೇಳಿದುದು ಸರಿಯಲ್ಲ. ವ್ಯಂಜನಾವ್ಯಾಪಾರದಿಂದ (ಬೇರು, ಗೆಡ್ಡೆ, ಗೆಣಸು) ವ್ಯಂಗ್ಯವಾದ ಅಲೌಕಿಕ ಸುಖವನ್ನು (ಪರಲೋಕದ ಸಂಬಂಧವುಳ್ಳದ್ದು) ನೀಡಿ, (ಅಲೌಕಿಕ) ರಸಾನುಭವವನ್ನು ನೀಡುವುದು. ಧ್ವನಿ ಪ್ರಸ್ಥಾನಕ್ಕೆ ಸಮ್ಮತವಾದುದು. ಈ ಮತದಂತೆ ಹೊಲ-ಬೆಳೆ. ಬ್ಲಾಕ್ ಮಾರ್ಕೆಟ್-ಕಪ್ಪು ಧಾನ್ಯಗಳ ಸುದ್ದಿಯಿಲ್ಲ. ಕೋ ಆಪರೇಟಿವ್ ಸೊಸೈಟಿ, ರೇಷನ್‌ಕಾರ್ಡ್ ಮೊದಲಾದ ಶಬ್ದಗಳನ್ನು ಉಪಯೋಗಿಸುವುದು ಬಳಕೆಗೆ ಬಂದಿದೆ. "ತಾನು ತಿನ್ನಬೇಕು" ಎಂಬ ನೀಚಸ್ವಾರ್ಥದ ಬಲೆಯಿಂದ ಬಳಕೆದಾರರನ್ನು ಬಿಡಿಸಿ ಸೊಸೈಟಿ, ಕ್ಲರ್ಕ್, ಬಂಡವಾಳ ತೊಡಗಿಸಿದ ಸಹಕಾರಿ ಇವರ ಮುಖಾಂತರ "ನಾವು" "ನಮ್ಮವರು" ಎಂಬ ಗುಂಪಿನ ಹಿತವನ್ನು ಸಾಧಿಸುವ ನಿಸ್ವಾರ್ಥವು ಧ್ವನಿತವಾಗಬೇಕೆಂದು ಒಪ್ಪಲಾಗಿದೆ.

ಕಾರಿಕೆ : **ವಾಕ್ಯಂ ರಸಾತ್ಮಕಂ ಕಾವ್ಯಂ**

ವೃತ್ತಿ : ಆಹಾರದ ಹೆಸರನ್ನು ಒಳಗೊಂಡ ವಾಕ್ಯವೇ ರಸಾತ್ಮಕವಾಗಿದೆ-ಮನೆಯಲ್ಲಿ ತಟ್ಟೆ, ಎಲೆಗಳಲ್ಲಿ ಕಲಸಿ ಊಟಮಾಡುವುದಲ್ಲ !

ವಿಭಾವಾನುಭಾವ ವ್ಯಭಿಚಾರೀ ಭಾವಗಳ ಸಂಯೋಗದಿಂದ ನಿಷ್ಪತ್ತಿಯಾದ ರಸವನ್ನು ಸಾಮಾಜಿಕನು ತನ್ನ ಸಂಸ್ಕಾರದ ಬಲದಿಂದ ಹೇಗೆ ತನ್ನ ಮತಿದರ್ಪಣದಲ್ಲಿ ಸವಿಯುವನೋ ಹಾಗೆ ಕಂಟ್ರೋಲ್ ಎಂಬ ವಿಭಾವ, ಅಭಾವವೆನ್ನುವ ಅನುಭಾವ ಮತ್ತು ಹಂಚಿಕೆ ವ್ಯವಸ್ಥೆಯ ವ್ಯಭಿಚಾರೀ ಭಾವಗಳಿಂದ ನಿಷ್ಪನ್ನವಾದ ಆಹಾರವನ್ನು (ಮತಿದರ್ಪಣದಲ್ಲಿ) ಹಿಂದೆ ಊಟಮಾಡಿದ್ದ ಸಂಸ್ಕಾರ ಬಲದಿಂದ ಸವಿಯಬೇಕು. (ತಟ್ಟೆಯಲ್ಲಿ ಕಲಸಿ ಉಣ್ಣುವುದು ಗೌಣ (ಆಹಾರ) ಕಾವ್ಯರಸ)

ರಸವು ಎಲ್ಲಿದೆ

ಕಾರಿಕೆ : **ಅಧಿರುಹ್ಯ ಪರಾಂಕೋಟಿಂ ಕೋಪೋರೌದ್ರಾತ್ಮತಾಂಗತಃ**

ವೃತ್ತಿ : ಕಥಾಪುರುಷರಲ್ಲಿಯೇ ಮುಖ್ಯವಾಗಿ ರಸವಿದೆ ಎಂಬುದು ಲೊಲ್ಲಟಾದಿಗಳ ಮತ. (ಎಂದರೆ ಸರಕಾರೀ ಗೋಡೌನ್‌ಗಳಲ್ಲಿಯೇ ಎಂಬ ಶಂಕೆಗೆ ಎಡೆಗೊಡುತ್ತದೆ) ಕಥಾಪುರುಷರೆಂದರೆ, ಆಹಾರ ಹಂಚಿಕೆಯ ಜವಾಬುದಾರಿ ಹೊತ್ತ ಪ್ರಮುಖ ವ್ಯಕ್ತಿಗಳಲ್ಲಿ ರಸವಿದೆ. ಆದಕ್ಕಾಗಿ ರೌದ್ರ, ಕೋಪಗಳು ಎಷ್ಟು ಉಕ್ಕಿ ಬಂದರೂ ಅದು ಪ್ರಯೋಜನವಿಲ್ಲ.

ಕಾರಿಕೆ : (ಖಿಲವಾಗಿದೆ)

ವೃತ್ತಿ : ಚಿತ್ರತುರಗ ನ್ಯಾಯದಿಂದ ನಟನು ಅನುಕರಿಸುತ್ತಿರುವುದನ್ನು ಸಾಮಾಜಿಕರು ನಿಜವಾಗಿಯೇ ಇರುವುದೆಂದು ಊಹಿಸುತ್ತಾರೆ. ಕಥಾಪುರುಷರಲ್ಲಿ (ಮಂತ್ರಿ, ಸೆಕ್ರೆಟರಿ ಮೊದಲಾದವರಲ್ಲಿ) ರಸ ಇರುವುದು ಅಸಂಭವ. ಅವರ ಅನುಕರ್ತರಾದ ಸೊಸೈಟಿ, ತಹಶೀಲ್ದಾರ್, ಮೊದಲಾದವರಲ್ಲಿ ಇದೆ. ಅವರು ಆಗಾಗ ಚೀಲಗಳನ್ನು ಹೇರಿಸುವುದನ್ನು ಕಂಡ ಸಾಮಾಜಕರಿಗೆ ವೇದ್ಯವಾಗುತ್ತದೆ.

ಕಾರಿಕೆ ; **ಸಾಧಾರಣೀಕರಣಂ ಚೈದದೇವಯತೆ ಸಂಘಾದಿ ವಿಶೇಷಾಣಂ ಜನಸಾಮಾನ್ಯೋಪಸ್ಥಿತಿಃ........**

ವೃತ್ತಿ ; ರಸದ ಅನುಭವವು ಸಾಧಾರಣೀ ಕರಣದಿಂದ ಆಗುತ್ತದೆ. ಎಂದರೆ ರಸವು ಕಾವ್ಯ (ಆಹಾರ) ದಲ್ಲೇ ಇದೆ. ಹಿಂದೆ ಹೇಳಿದ ಸೊಸೈಟಿಯು ಚೀಲಾದಿಗಳನ್ನು ನೋಡಿದವನು ಅದು ಆ ಸೊಸೈಟಿಯದು ಎಂಬ ವಿಶೇಷ ಸ್ಥಿತಿಯನ್ನು ಮರೆತು ತನ್ನ

ಮತ್ತು ನೆರೆಹೊರೆಯುವರಲ್ಲಿಯೇ ಅದು ಇದ್ದಂತೆ ಭಾವಿಸಿ ಬ್ರಹ್ಮಾನಂದ ಸದೃಶವಾದ ಆನಂದವನ್ನು ಭಾವಕತ್ವ, ಭೋಜಕತ್ವಗಳ ಅಧ್ಯಾಸದಿಂದ ಪಡೆಯುತ್ತಾನೆ.

ಕಾರಿಕೆ : ಊರ್ಧೋರ್ಧ್ವ ಮಾರುಹ್ಯ ಯದರ್ಥತತ್ವಂ
ಧೀಃಪಶ್ಯತಿ ಶ್ರಾಂತಿಮವೇದಯಂತೀ
ಫಲಂತದಾದ್ಯೈಃ ಪರಿಕಲ್ಪಿತಾನಾಂ
ವಿವೇಕಸೋಪಾನ ಪರಂಪರಾಣಾಂ

(' ಪರಿಕಲ್ಪಿತಾನಾಮ ವಿವೇಕ ಸೋಪಾನ ಪರಂಪರಾಣಾಂ ' ಎಂಬ ಪಾಠಾಂತರ ವುಂಟು)

ಹಿಂದೆ ಹೇಳಿದ ಅನೇಕ ವಿವೇಕ ಸೋಪಾನ ಸರಣಿಗಳಿಂದ (ಪಾಠಾಂತರವನ್ನೊಪ್ಪಿಕೊಂಡರೆ ಅವಿವೇಕಪರಂಪರೆಯ ದೆಸೆಯಿಂದ) ಬೆಲೆಗಳು ಗಗನಕ್ಕೇರಿಬಿಟ್ಟಿವೆ. ಸ್ವಲ್ಪವೂ ಕಷ್ಟವಿಲ್ಲದೆ ಇದರರಿವು ಆಗುತ್ತಿದೆ. ಹೀಗೆ ಅಗಲುಬಿಟ್ಟ ಮೊದಲ ಸೂರಿಗಳು (ಪ್ಲಾನಿಂಗ್ ಕಮಿಷನ್, ಆಹಾರ ಸಚಿವ ಶಾಖೆ, ಸಹಕಾರೀ ಸಂಘ ?) ಮಾಡಿದ ಜಾಡಿನಿಂದಲೆ ಇದು (ಇಂದಿನ ಪರಿಸ್ಥಿತಿ) ಸಾಧ್ಯವಾಯಿತು. ನಾವು ಅವರನ್ನು ದೂಷಿಸುತ್ತಿಲ್ಲ, ಅದನ್ನೇ ಶೋಧಿಸಿ ಸಂಯೋಜನೆಗೊಳಿಸುತ್ತೇವೆ.

ಕಾರಿಕೆ : ವ್ಯಂಗ್ಯ ವ್ಯಂಜನ ಸಂಬಂಧೌ

ಯಾವುದಕ್ಕೇ ಆಗಲಿ ಅನುಭವವೇ ಪರಮ ಪ್ರಮಾಣವಷ್ಟೇ. ವಿಭಾವ (ಆಹಾರ ನೀತಿ) ಅನುಭಾವ (ಆಹಾರದ ಅನುಭವ) ಗಳಿಗೆ ವ್ಯಂಜನಾವ್ಯಾಪಾರ ಮತ್ತು ವ್ಯಂಗ್ಯಾರ್ಥಗಳಿಗಿರುವ ಸಂಬಂಧವಿದೆ. ವಾಸನಾತ್ಮಕವಾಗಿದ್ದ ಸ್ಥಾಯಿಭಾವ (ಹಿಂದೆ ಮಾಡುತ್ತಿದ್ದ ಊಟ) ರಸರೂಪದಿಂದ ಪ್ರಕಾಶಗೊಳ್ಳುತ್ತದೆ.

ಸಂದೇಹ : ನೀವು ವಿಶ್ವಸಾಮಾನ್ಯ ತತ್ವವನ್ನು ಮುಂಡಿಸುತ್ತಿಲ್ಲವಲ್ಲಾ ?

ಸಮಾಧಾನ ; ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಧರೆಯೊಳ್
ಕಂಡರ್ ಕೇಳ್ವೊಡೆ ಗೊರವನ
ಡುಂಡುಚಿಯೋ ಬೀದಿವರಿಯೆ ಬೀರನ ಕಥೆಯೋ.

ವಿವಿಧ ಕಳೆಗಳು ಎಂದರೆ ಹಣ, ಅಧಿಕಾರಿ, ಸೊಸೈಟಿಗಳಲ್ಲಿ ಸ್ವಜನರನ್ನು ಹೊಂದಿರುವುದೇ ಮೊದಲಾದುವುಗಳಿಂದ ಮಂಡಿತರಾದ ಪಂಡಿತರಿಗೆ (ಆಹಾರ) ರಸಭಾವವೆಲ್ಲಿದೆ. ಇಲ್ಲೊಂದು ಶ್ಲೋಕವಿದೆ.

ವ್ಯಾಖ್ಯಾಗಮಮಿದಂ ಕಾವ್ಯಮುತ್ಸವಂ ಸುಧಿಯಾಮಲಂ
ಹತಾದುರ್ಮೇಧ ಸಶ್ಚಾಸ್ಮಿನ್ ವಿದ್ವತ್ಪ್ರಿಯತಯಾಮಯಾ

ಆಹಾರವು (ಸ್ವಜನಪಕ್ಷಪಾತ, ಆಡಳಿತದ ಸಂಕೀರ್ಣತೆ, ಅದೃಷ್ಟ ಮೊದಲಾದವುಗಳನ್ನೊಳಗೊಂಡ) ವ್ಯಾಖ್ಯಾನಕಾರರಿಗೆ ಉತ್ಸವವನ್ನುಂಟುಮಾಡುತ್ತದೆ. ಇದನ್ನರಿಯದೆ (ನಂಬಿ ಕುಳಿತಿದ್ದ) ಜಡಮತಿಗಳು ಹತಾಶರಾದರು.

ಕಾರಿಕೆ : ಈ ಎರಡನೂ ನೆರವುಗೊಂಡು ವಿಶ್ವವ ನಾವು
ತಿರುತಿರುಗಿ ನಿರುಕಿಸುತ ಬಲು ದಣಿದೆವು
ದೊರೆಯದೆಯೇ ಹೋದುವೈ ಮತ್ತೆ ಸಾಗರಶಯನ
ನಿನ್ನ ಭಕ್ತಿಯ ಹೋಲಬಲ್ಲ ಸುಖವು

ದುರ್ಲಭವಾದ ಹಣವನ್ನೂ, ಅತ್ಯಂತ ದುರ್ಲಭವಾದ ಸ್ವಜನನನ್ನೂ (ಸಂಪಾದಿಸಿ) ನಮ್ಮ ಬೆಂಬಲದಲ್ಲಿಟ್ಟುಕೊಂಡವರಾಗಿ (ಎಂದರೆ ಸಂಪಾದಿಸುವ ಭ್ರಮೆಯಿಂದ) ನಾವು ಸೊಸೈಟಿ, ಅಂಗಡಿಗಳ ಬಾಗಿಲುಗಳನ್ನು ಅಲೆದಲೆದು ಆಶೆಯಿಂದ ನೋಡಿದೆವು. ಓ ಭಗವಂತ, ಶ್ರೀ ಹರೀ, ಈ ವ್ಯಾಪಾರ ಗಿಟ್ಟಲಿಲ್ಲ. ಆದರೂ ನಮಗೆ ಹೇಗೋ ಕಾವ್ಯ (ಆಹಾರ) ಸುಖವನ್ನು ಕೊಟ್ಟ ನಿನ್ನ ಭಕ್ತಿಯಲ್ಲಿರುವಂತಹ ಸುಖವು ಇನ್ನೆಲ್ಲಿ ಹುಡುಕಿದರೂ ಕಾಣಲಿಲ್ಲವು ಎಂದು ತಾತ್ಪರ್ಯವು.

(ಇದೊಂದು ಸಹೃದಯ ವಿಮರ್ಶೆ. ಕಾವ್ಯದ ಬಗೆಗೆ ಈ ಕಾರಿಕೆಗಳನ್ನು ತೋರಿಸಿದ ನನ್ನ ಪೂಜ್ಯ ಗುರುಗಳಾದ ಭರತ, ದಂಡಿ, ಭಾಮಹ, ಆನಂದವರ್ಧನ, ಮಮ್ಮಟ. ಅಭಿನವಗುಪ್ತರಿಗೆ ಋಣಿಯಾಗಿದ್ದೇನೆ. ಇದಕ್ಕೆ "ತೋರಣ ನಾಂದಿ" ಯೆಂದು ಹೆಸರಿಡಬೇಕೆಂದು ಸಲಹೆ ಬಂತು. ಆದರೆ "ಸಿಗಿದು ತೋರಣ ಕಟ್ಟು" ಎಂಬ ಪ್ರತಿಮೆ ಧ್ವನಿತವಾದೀತೆಂದು ಬೆದರಿ ಪ್ರಸಕ್ತದಲ್ಲಿಟ್ಟಿರುವ ಹೆಸರನ್ನಿಟ್ಟಿದ್ದೇನೆ.

ಅನುಬಂಧ

ಕವಿ ಎಂದರೆ ದ್ರಷ್ಟಾರ (ಪರದೇಶವಲ್ಲಿ) ಕಾವ್ಯವನ್ನು ಕಂಡವನು ಅದರರಿವಿಲ್ಲದೆ ಕಾವ್ಯವು "Pouring forth of emotions" ಎಂದು ತಿಳಿದು ಲೊಟಿ ಇತ್ಯಾದಿಗಳಲ್ಲಿ ತೊಡಗಿರುವುದು ಕಾವ್ಯದ ರಸಾನುಭವದ ಸ್ವರೂಪವನ್ನರಿಯದವರ ಅಪಕ್ವ ಬುದ್ಧಿಯನ್ನು ತೋರುತ್ತದೆ,

—ಕವಿಕುಲಲಾಮ

ಹಿಡಿ ಅಕ್ಕಿಯ ಗಾದೆಗಳು

ಅಕ್ಕಿ ಕೊಡಿಯಪ್ಪಾ ಎಂದು ಭಿಕ್ಷಕರು ಬೇಡಿದರೆ
—ಕೃಷ್ಣಪ್ಪನವರನ್ನು ತೋರಿಸಿದರಂತೆ,

* * * *

ಮುಡಿ ಅಕ್ಕಿಗೆ ಮೂರು ಹರಿದಾರಿ ಕ್ಯೂ,

* * * *

ಹೊಟ್ಟೆಗೆ ಹಿಟ್ಟಿಲ್ಲ ಆದರೆ ಜುಟ್ಟಿಗೆ ಮಲ್ಲಿಗೆ ಮೊಗ್ಗು.

* * * *

ಅಕ್ಕಿ ಬೆಲೆ ಅಟ್ಟಕ್ಕೆ ಹೋದರೆ
ಲಂಚಕ್ಕೆ ಮಂಚ ಹಾಕಿದಂತೆಯೇ

* * * *

ಊರಕ್ಕಿ ಊರಬೇಳೆ ಉಂಡು ಹೋಗೋ ಮಾರಮ್ಮ
ಅಂದರೆ ಬೇಡ ಭಕ್ತ. ಕೋಳೀನೇ ಸಾಕು ಅನ್ನೋದೇ !

* * * *

ಯಾಕೆ ಬೋರಿ ಇಷ್ಟೊತ್ತು ಅಂದರೆ
ಅಕ್ಕಳ್ಳು ತರುಕ್ಕೆ ಆರೆ ದಿನ ಆಯ್ತು ಅಂದಳು.

* * * *

ಒಪ್ಪತ್ತುಂಡವ ಯೋಗಿ
ಎರಡು ಹೊತ್ತುಂಡವ ಭೋಗಿ
ಮೂರು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ
ಅಂತ ಹಳೆ ಗಾದೆ

ಒಪ್ಪತ್ತುಂಡವ ರೋಗಿ
ಎರಡು ಹೊತ್ತುಂಡವ ಮಂತ್ರಿ
ಮೂರು ಹೊತ್ತುಂಡವ ಸೊಸೈಟಿ ಸಿಬ್ಬಂದಿ

* * * *

ಹುಚ್ಚು ಗಂಡುಗಳ ಆಡಳಿತದಲ್ಲಿ ಉಂಡವನೇ ಜಾಣ.

* * * *

ಆಹಾರ ಸಚಿವ ಅಯ್ಯೋ ಅಂದರೆ, ಬಡವರ ಹೊಟ್ಟೆ ತುಂಬಿತೇ

* * * *

ಕೇಂದ್ರ, ರಾಜ್ಯಗಳ ಮಂತ್ರಿಗಳ ಹಗರಣದಲ್ಲಿ
ಜನರು ಮೆತ್ತಗಾದರು.

ಗಂಡನ ಮನೆಯೆ ಶರಣು !

(ಅಂಬಿಕಾತನಯ ದತ್ತನ ಕ್ಷಮೆಯನ್ನು ಯಾಚಿಸಿ)

'ನ್ಯಾಯಲಕ್ಷ್ಮಿಯ ಅಂಕೆಯಲ್ಲಿರೆನು' ಎಂದಳಂತೆ
ರಾಷ್ಟ್ರ ಪುರುಷನ ಕಿರಿಯ ಮಗಳು ಶಾಸಕಾಂಗನೆಯು.

'ತಲೆ ಏರಿ ಕುಳಿತಿರುವ ಈ ಮದಗಮನೆಗೆ ತಕ್ಕ ಬುದ್ಧಿ
ಕಲಿಸೇನು' ಎಂದನಂತೆ ಒಬ್ಬ ಹಿರಿಯಣ್ಣ !

ನಿಮ್ಮ ರುಚಿಗಳಿಗೆ ನಾಮಣೆಯೆ, ನನ್ನದೇ ರುಚಿ, ಎಂದು.
ಆಜ್ಞಾಪಿಸಿದಳಂತೆ ಪಾಕಶಾಲೆಯಲಿ, ನಡುಕಲವಳು—ಕಾರ್ಯಕಾರಣಿಯು !

ಅತ್ತ ಭಾರತಿ ಮುರಿವಳು ಲಟಕು, ಚಿಟುಕಾಡಿಸುವಳು
ತಲೆ ಏರಿ ಕುಳಿತ ಬ್ರಿಟೀನಿಯಳ ಕಂಡು !

ಇತ್ತ ಕಿರಿಯವಳ ಪಾರುಪತ್ಯ ಮಧ್ಯದವಳ ಸರ್ವಾಧಿಕಾರತ್ವ
ಸುಡುತಲಿದೆ ನಲವತ್ತುನಾಲ್ಕು ಕೋಟಿ ಮಕ್ಕಳ ಮೋರೆ,

'ದೇವರೆ, ಸಾಕೀ ಕುಟುಂಬ ಕಲಹವು'
ಎಂದು ಗಂಡನ ಮನೆಗೆ, ಅಟ್ಟಿದನು ಬೆಳೆದ ಹೆಣ್ಣು ಮಕ್ಕಳ
ರಾಷ್ಟ್ರಪತಿಯೂ ಕೂಡ

ಎಂತಹದೋ U.P. ವಿಧಾನ ಸಭೆಯ ವಿಧಿ !
ಶಾಸಕರ ಶಾಸನವ ಮುಂದೆ ಮಾಡುವರು ಕಣ !

ಹಾ. ರಾ.

---

1. ಬ್ರಿಟಿಷ್ ಪಾರ್ಲಿಮೆಂಟಿನ ನಡವಳಿಕೆಗಳು ನಮ್ಮ ರಾಜ್ಯಾಂಗದಲ್ಲಿ ಅಂತರ್ಗತವಾಗಿವೆ.
2. Supreme Court.

ದೊಡ್ಡಟ್ಟಿ ದವಾಸೆಯವರೂ,
ನಿದ್ದೆಯಿಲ್ಲದ ರಾತ್ರಿಯೂ

★

ಲೋಕಸಭೆಯಲ್ಲಿ ಹದಿನೇಳನೆಯ ಅಮೆಂಡ್‌ಮೆಂಟ್ ಪಾಸಾಯಿತು. ಲಂಗೋಟಿ ಶಿವಣ್ಣನವರು ಫೇಲಾದರು. ಆಗ ಆದದ್ದು ಅರ್ಧ ಮಾತ್ರ. ಸುದ್ದಿಯ ಶಾಕ್‌ನಿಂದ ಪಾರ್ಶ್ವವಾಯು ಹೊಡೆಯಿತು. ಪೂರ್ತಿ ಆದದ್ದು ಮೊನ್ನೆ. ಅದರಲ್ಲಿ ಹುದುಗಿದ್ದ ಕೊನೆಯ ನಂಬಿಕೆಯೂ ನುಚ್ಚುನೂರಾದಾಗ. ಬಹುಶಃ ಈ ವಿಚಾರ ಗಜೇಂದ್ರ ಗಡ್ಕರರಿಗೆ ತಿಳಿಯಲಿಕ್ಕಿಲ್ಲ, ಯಾವಾಗಲೂ ಹೀಗೆಯೇ ಕೇಂದ್ರದ ಒದೆ ಕೊಳ್ಳೆಗಾಲದ ಕತ್ತಿಗೆ.

ಲಂಗೋಟಿ ಶಿವಣ್ಣನವರು ಸದಾ ಶುಭ್ರಧೋತರ ಕೊಳ್ಳೇಗಾಲದ ಸಿಲ್ಕು ಜುಬ್ಬ-ಶಲ್ಯಗಳನ್ನೇ ಧರಿಸುತ್ತಿದ್ದರು. ಅವರ ಪೂರ್ವಿಕರು ಟಿಪ್ಪೂಸುಲ್ತಾನನ ಕಾಲದಲ್ಲಿ ಕೊಳ್ಳೇಗಾಲಕ್ಕೆ ವಲಸೆ ಬಂದಿದ್ದು, ದಂಡಿಗೆ ಹೆದರಿ ಮಾರೇಹಳ್ಳಿಯಿಂದ ಓಡಿಬಂದವರಂತೆ. ಧರಿಸಿದ್ದು ಕೇವಲ ಕೌಪೀಣ. ಆದುದರಿಂದಲೇ ಅವರ ವಂಶಕ್ಕೆ ಲಂಗೋಟಿಯ ನಂಟು. ಕೊಳ್ಳೇಗಾಲಕ್ಕೆ ಬಂದವರು ಕಾವೇರೀ ಬಯಲಿನಲ್ಲಿ ಮೈಲು ಚದುರ ಭೂಮಿಗೆ ಬೇಲಿ ಹಾಕಿಕೊಂಡರು. ಅವರ ಮೊಮ್ಮಕ್ಕಳ ಮರಿ-ಮಕ್ಕಳೇ ನಮ್ಮ ಲಂಗೋಟಿ ಶಿವಣ್ಣನವರು. ಲಂಗೋಟಿ ಕಟ್ಟಿ ಬೆಳಸಿದ ಆಸ್ತಿಯನ್ನು ಇವರು ಸಿಲ್ಕು ಧೋತರದೊಡನೆ ಆಳಲು ಬಯಸಿದರು. ಕಾವೇರೀ ಸುತ್ತಮುತ್ತಲ ಭೂಮಿಗಳನ್ನು ಗೇಣಿಗೆ ಕೊಟ್ಟು ತಮ್ಮ ನೇಗಿಲನ್ನು ಅಟ್ಟದ ಮೇಲಿಟ್ಟರು. ಹಾಗೆ ದರ್ಬಾರು ನಡೆಸಿ ಕೊನೆಗೆ ಈ ದಿನವನ್ನು ನೋಡಬೇಕಾಗಿ ಬಂದಿತು. ಗೇಣಿ ಒಂದು ಕಾಳು ಬರುವುದು ನಿಂತರೂ, ನ್ಯಾಯವಿದ್ದೇ ಇದೆ ಅಂತಿದ್ದವರ ಇತಿಪೂರ್ತಿ ಗಜೇಂದ್ರ ಗಡ್ಕರ್‌ರವರಿಂದ ಆಯಿತು, ಮತ್ತೆ ತಮ್ಮ ಮಕ್ಕಳ ಪಾಲಿಗೆ ಲಂಗೋಟಿಯೇ ಎಂಬುದು ಸಹಿಸದೆ ಶಿವೈಕ್ಯರಾದರು ಶಿವಣ್ಣ.

ಪ್ರಸ್ತುತ ಈ ಲೇಖ ಅವರನ್ನು ಕುರಿತುದಲ್ಲ. ಅವರನ್ನೇ ನೆನೆಯುತ್ತ ನೂರಾರು ಚಿಂತೆಗಳೊಡನೆ ಮನೆ ಮೆಟ್ಟಲೇರಿದ ದೊಡ್ಡಟ್ಟಿ ದವಾಸೆಯವರನ್ನು ಕುರಿತು. ಕೊರವಂಜಿಯ ಓದುಗರು ದೊಡ್ಡಟ್ಟಿ ದವಾಸೆಯವರನ್ನು ಬಹುಶಃ ಮರೆತಿರಲಿಕ್ಕಿಲ್ಲ; ತೋಟಗಾರಿಕಾಧ್ಯಕ್ಷರ ಮರಳು ಮಾತಿಗೆ ಮನೆ ಹಿತ್ತಲ ಮಾವು, ಹುಣಿಸೆ ಮರಗಳನ್ನು ತೆಗೆಸಿದ ಶ್ರೀಮಾನ್ ದೊಡ್ಡಟ್ಟಿಯವರನ್ನು ಇಷ್ಟು ಬೇಗ ಮರೆಯಲಿಕ್ಕಾಗದು,

ದೇಶದ ಆಹಾರಾಭಾವದಲ್ಲಿ ನಿಮ್ಮ ಪಾತ್ರವೇನು ? ಎಂದು ಸೆಂಟ್ರಲ್‌ನವರು ಹಾಕಿದ ಬೊಬ್ಬೆ ಸ್ಟೇಟು ಡಿಸ್ಟ್ರಿಕ್ಟ್‌ಗಳನ್ನು ಹಾದು ಕೊಳ್ಳೇಗಾಲಕ್ಕೆ ಬಂದಿತು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರು ತಿರುಗು ಕುರ್ಚಿಯಲ್ಲಿ ಸರ್ರನೆ ಮೂರಾವರ್ತಿ ತಿರುಗಿ, ಗ್ರಾಮಸೇವಕ ಹನುಮನನ್ನು ಕರೆಸಿ, Damn it ಎಂದು ಟೇಬಲ್ಲನ್ನು ಗುದ್ದಿದರು. ಗ್ರಾಮಸೇವಕ ಹನುಮನ ಗಾಳಕ್ಕೆ ಗಂಟಲು ಕೊಟ್ಟವರು ಸಾಕ್ಷಾತ್ ದೊಡ್ಡಟ್ಟಿ ದಮಾಸೆಯುವರು.

ಗ್ರಾಮಸೇವಕ ಹನುಮನ ಪರಸನಲ್ ನೋಟು ಬುಕ್ಕಿನ ಒಂದು ಹಾಳೆಯಿಂದ ಭಾರತದ ಸಂಪತ್ತು. ಭೂಮಿಯೇ ಭಾರತ. ಯೋಜನೆಯ ಜಯವೇ ಜನತೆಯ ಅಭ್ಯುದಯ. ಭವಿಷ್ಯತ್ತಿನ ಭರವಸೆಗೆ ವಿಮಾ ಮಾಡಿರಿ. ಹೆಚ್ಚು ಬೆಳೆಯಿರಿ ಅಥವಾ ಮಡಿಯಿರಿ.

೧. ಹಳೆಯ ಪದ್ಧತಿಯಿಂದ ಹೊಸ ಪದ್ಧತಿಗೆ (ಉದಾ : ಜಪಾನು ಮಾದರಿ ಬೆಳೆ)

೨. ಗೊಬ್ಬರದಲ್ಲಿ ಬದಲಾವಣೆ (ಉದಾ : ಸೈಂಟಿಫಿಕ್ ಮೆನ್ಯೂರ್)

೩. ಉತ್ತಮ ಬಿತ್ತನೆ. (ಉದಾ : ಸರ್‌ಟಿಫೈಡ್ ಸೀಡ್ಸ್)

೪. · ಹೊಸ ನೇಗಿಲು, ನೀರು ಹಾಯಿಸುವದರಲ್ಲಿ ಹೊಸ ಕ್ರಮ. ಇತ್ಯಾದಿ.

ಕಳೆದ ವರ್ಷ ಕೊಳ್ಳೇಗಾಲದಲ್ಲಿ " ಹೊಸ ವ್ಯವಸಾಯ ಪದ್ಧತಿ " ಜಾರಿಯಲ್ಲಿದ್ದುದು, ವ್ಯವಸಾಯ ಖಾತೆಯ ಸರ್ವೇ ಪ್ರಕಾರ. ಶೇಖಡ ೫೦ಕ್ಕೂ ಹೆಚ್ಚು. ಈ ಸಲ ಅದರಲ್ಲಿ ಮತ್ತಷ್ಟು ಪ್ರಗತಿ ತೋರಿಸಬೇಕು, ಶೇಕಡ ೧೦ ರಷ್ಟಾದರೂ Out Put ಹೆಚ್ಚಾಗಲೇಬೇಕು ಎಂಬುದು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರ ಆಸೆ, ಇದರಲ್ಲಿ ಹನುಮನ ಕೈವಾಡವಾದರೂ ಏನು ? ಜಪಾನು ಪದ್ಧತಿಗೆ ಹನುಮನ ಜುಲುಮಿನಿಂದ ' ಹೂಂ ' ಅಂದವರು ದೊಡ್ಡಟ್ಟಿಯವರೊಬ್ಬರೇ. ಅವರದು ಯಾವಾಗಲೂ ಸಾಹಸದ ಪ್ರಕೃತಿ, " ಅದೇನೋ ಅಂತಾನೆ ಜಪಾನು ಪದ್ಧತಿ ! ಜಪಾನು ಬಲು ದೊಡ್ಡ ದೇಶ. ಜಪಾನು ಪೆನ್ನು, ಪೆನ್ಸಿಲ್ಲುಗಳು ಪಾವಲಿಗೆಲ್ಲಾ ಸಿಗುತ್ತವೆ. ನೋಡೇಬಿಡುವ " ಎಂದುಕೊಂಡರು ಅವರು.

ಸರ್ವೆಗೆ ಅಂಕಿ ಅಂಶಗಳನ್ನು ಒದಗಿಸುವಾಗ, ಶತಾಂಶ ಕೊಡುವುದು ಸರಿಯುಲ್ಲವೆಂದು ಹನುಮ. ಶೇಖಡ ಹತ್ತರಷ್ಟು ಎಂದು ಬರೆದು ಕಳಿಸಿದ್ದ. ಅದು ಸೆಂಟ್ರಲ್ ತಲುಪುವ ಹೊತ್ತಿಗೆ ಶೇಖಡ ಐವತ್ತರಷ್ಟು ಆಗಿದ್ದಿತು, ಭಾರತಾದ್ಯಂತ ಬಂದ ಸರ್ವೆಯ ಭರ್ಜರಿ ಅಂಕಿ ಅಂಶಗಳಿಂದ ತೃಪ್ತಿಗೊಂಡಿದ್ದ ' ಸೆಂಟ್ರಲ್ ' ನವರು, ಆಹಾರಾಭಾವಾಂತರ ಆರಂಭವಾಗುತ್ತಲೇ Damn This ಎಂದು ಸ್ಟೇಟಿಗೆ ಗುಮ್ಮಿದರು ಅದು ಬಂದು ನಿಂತುದು ಹನುಮನ ಹತ್ತಿರ.

ದೊಡ್ಡಟ್ಟಿಯವರಾದರೋ, ಜಪಾನು ಪದ್ಧತಿಯಂತೆ ಅಡಿ ಅಂತರಕ್ಕೆ ಒಂದೊಂದು ಪೈರಿನಂತೆ ತಮ್ಮ ಪತ್ತಿಕೆರೆ ಭೂಮಿಯಲ್ಲೂ ನಾಟಿ ಮಾಡಿಸಿದ್ದರು. ಸೈಂಟಿಫಿಕ್ ಸೀಡ್ಸನ್ನೇ, ಹನುಮನಿಂದ ತರಿಸಿ, ಬಿತ್ತಿಸಿದ್ದರು; ತಮ್ಮ ಕಾಲ್ನಡೆಗಳ ಗೊಬ್ಬರವನ್ನು ಆಚೀಚೆಯವರಿಗೆ ಮಾರಿ, ಅಮೋನಿಯಂ ಸಲ್ಫೇಟನ್ನೇ ತರಿಸಿ ಗದ್ದೆ ಪೂರ ಎರಚಿಸಿದ್ದರು. ಇವನ್ನೆಲ್ಲಾ ಒಂದಿನಿತೂ ಬೇಸರಿಸದೆ, ಶುದ್ಧ ಮನಸ್ಸಿನಿಂದ ನಡೆಸಿದ್ದರು. ಆದರೆ ಇಂದು ಅವರು ಮನೆಯ ಮೆಟ್ಟಲುಗಳನ್ನು ತುಳಿದಾಗ ಚಿಂತಾ ಕುಲರಾಗಿದ್ದರು. ನೂರು ಚಿಂತೆಯಲ್ಲಿ ಲಂಗೋಟಿ ಶಿವಣ್ಣನವರಿಗೆ ಮತ್ತೊಂದು ಚಿಂತೆ. ಗ್ರಾಮಸೇವಕ ಹನುಮ ಹೇಳದೇ ಕೇಳದೇ ಪರಾರಿ,

ಎಲ, ಇದೇನು ಇವ ಬರೆಯ ಹೊರಟಿರುವುದಾದರೂ ? ಲೇಕದ ಅಂಕಿತಕ್ಕೂ ಅಂತಕ್ಕೂ ಅಜಗಜಾಂತರವಿದೆಯಲ್ಲಾ ಎಂದು ವಾಚಕರು ಅಚ್ಚರಿಪಡಬಹುದು. ನಿಜ, ಲೇಖಕ ಸ್ವಸ್ಥವಾಗಿದ್ದಾನೆ. ಬರೆಯಹೊರಟ ಲೇಖ ನವ್ಯತರದ್ದು. ತಾಳ್ಮೆಯಿಂದಿ ರಬೇಕೆಂದು ಬಿನ್ನಹ. ಪ್ರಸ್ತುತ ದೊಡ್ಡಟ್ಟಿಯವರು ಹಾಸಿಗೆಯಮೇಲೆ ನಿದ್ದೆಯಿಲ್ಲದೆ ಹೊರಳಾಡುತ್ತಿದ್ದಾರೆ. ಹನುಮ ಊರು ಬಿಟ್ಟು ಹೋದರೆ, ಊರವರು ಇವರನ್ನು ಬಿಡಬೇಕಲ್ಲ! ಶಿವರಾಳ ಅಂದು ಸಂಜೆಯೇ ಬಂದು, "ಸ್ವಾಮಿ, ನೀವೇನೋ ಜಪಾನು ಎಂದು ಅಡಿಗೆ ಒಂದು ಪೈರು ನಾಟಿ ಹಾಕಿಸಿ ಬಿಟ್ಟಿರಿ. ಆದರೆ ಭೂಮಿ ಎಂಥದು ಅಂತ ಸ್ವಲ್ಪ ಚಿಂತೀ ಮಾಡಬ್ಯಾಡವ ? ಒಳ್ಳೇ ಎರೇ ಭೂಮಿ. ಕಾವೇರೀ ಪ್ರವಾಹ ಒಂದು ಸಲ ಬಂದು ಹೋದರೆ ನಂ ಗದ್ದೆಗಳಲ್ಲಿ ಹತ್ತಕ್ಕೆ ಒಂಬತ್ತು ಕೊಳೆ ತರೂ, ಒಂದು ಪೈರಾದರೂ ಉಳಿಯುತ್ತೆ. ನಿಂ ಜಪಾನಲ್ಲಿ ಏನು ಉಳಿಯುತ್ತೇ ? ಅಂತ ಹೆದರಿಸಿ ಹೋದರೆ,' ಇತ್ತ ಶ್ರೀಕಂಠಶಾಸ್ತ್ರಿಗಳು, ದಮಾಸೆಯವರೇ, ಏನು ಮಾಡಿಬಿಟ್ಟಿರಿ! ಬರೀ ಸೀಮೇ ಗೊಬ್ಬರ ಹಾಕಿಸಿದಿರಂತಲ್ಲ! ಭೂಮಿ Acidity ಹೆಚ್ಚುತ್ತಲ್ರೀ...ಅಮ್ಲ! ಅಮ್ಲ!" ಅಂತಂದ್ರು.

ದಮಾಸೆಯವರು ಬಲದಿಂದ ಎಡಗಡೆಗೆ ಹೊರಳಿದರು. ಹಳೆಯ ಕಾಲದ ಮರದ ಮಂಚ ಕಿರ್ರೆಂದಿತು. ಅಡಿಗೆ ಮನೆಯಿಂದ ಶ್ರೀಮತಿ ಕಮಲಮ್ಮ ದೊಡ್ಡಟ್ಟಿ ಯವರು ಪಾತ್ರೆಗಳನ್ನು ತೊಳೆದು ಜೋಡಿಸಿಡುತ್ತಿರುವ ಶಬ್ದ ಕೇಳಿ ಬರುತ್ತಿದ್ದಿತು. ಕಮಲಮ್ಮನವರದು ಬಹುದಿವನಾದ ಜೀವ, ಅವರ ನಾಲ್ವತ್ತ ವರ್ಷಗಳ ಗೃಹಸ್ಥಿಕೆ ಪತಿಯ ನಿಷ್ಠಾವಂತ ಸೇವೆಯಲ್ಲಿ ಕಳೆದಿದೆ. ಕಮಲಮ್ಮನವರ ತಂದೆ ದೊಡ್ಡಟ್ಟಿಯವರ ಮನೆಗೆ ಮಗಳನ್ನು ತುಂಬಿಸಿ ತೃಪ್ತಿಯ ನಿಟ್ಟುಸಿರನ್ನು ಬಿಟ್ಟಿದ್ದರು, ಮಗಳು ದೊಡ್ಡ ಮನೆ-ಕುಳ ಸೇರಿದಳೆಂದು. ದೊಡ್ಡಟ್ಟಿಯವರಲ್ಲಿ ಕಮಲಮ್ಮನವರಿಗೆ ದೊಡ್ಡ ಸೇವೆ ಕಾದಿದ್ದಿತು. ತರ್ಕಾರಿ ಹಚ್ಚುವುದರಲ್ಲೇ ಅವರ ದಿನದ ಕೆಲಸವೆಲ್ಲಾ ಆಗುತ್ತಿದ್ದಿತು, ಸೂರ್ಯವಂಶದ ರಾಜರು ಪ್ರತಿಮಾಗೃಹವೆಂದು ಒಂದು ಗೃಹವನ್ನಿಟ್ಟಿರುತ್ತಿದ್ದರಂತೆ.

ದೊಡ್ಡಟ್ಟಿಯವರ ಮನೆಯ ಒಂದು ಕೋಣೆಯ ತುಂಬ ಉರಿಗಳ ಮೇಲೆ ಕುಂಬಳಗಳು ನೇತಾಡುತ್ತಿರುತ್ತಿದ್ದವು. ಕೂಷ್ಮಾಂಡವೆಂದರೆ ದೊಡ್ಡಟ್ಟಿಯವರಿಗೆ ಬಲು ರುಚಿ. ಪಾಳ್ಯ, ಮುಳ್ಳೂರು, ಹಂಪಾಪುರ, ಕಲಿಯೂರು ಆದಿ ನವ ಗ್ರಾಮಗಳಿಂದಲೂ ಕುಂಬಳಗಳನ್ನು ಹೊರೆಸಿಕೊಂಡು ಬರುತ್ತಿದ್ದರು. ಅವುಗಳನ್ನು ಚಚ್ಚಿ ಹೋಳಿಸುವು ದರಲ್ಲೇ ಆಯಿತು ಕಮಲಮ್ಮನವರ ಆಯುಷ್ಯವೆಲ್ಲಾ.

ಕಮಲಮ್ಮನವರು ಕೊಟಡಿಗೆ ಬಂದರು, ದೀಪವಾರಿಸಿ ಮಲಗಿದರು. ದೊಡ್ಡಟ್ಟಿಯವರಿಗೆ ಮಂಪರು ಮಂಪರು ನಿದ್ದೆ. ಪೂರ ನಿದ್ರೆ ಆವರಿಸಲಿಕ್ಕೆ ಇನ್ನೂ ಕಾಲ ಬೇಕು. ಕಮಲಮ್ಮನವರು ಮಧುರ ಕಂಠದಲ್ಲಿ ಪಂಚ ಕನ್ನೆಯರನ್ನು ಸ್ಮರಿಸಿ, "ರಾಮಸ್ಕಂದಂ ಹನೂಮಂತಂ ವೈನತೇಯಂ ವೃಕೋದರಂ, ಶಯನೇನ ಸ್ಮರೇನ್ ನಿತ್ಯಂ ದುಃಸ್ವಪ್ನಂ ತಸ್ಯನಶ್ಯತಿ" ಎಂದು ಇತಿ ಹೇಳಿದ ಮೇಲೆಯೇ ಅವರಿಗೆ ಪೂರ ನಿದ್ದೆ ಬರಬೇಕಾದರೆ ಆವರ ನಾಲ್ವತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ

ದೊಡ್ಡಟ್ಟಿಯವರು ಹಾಗೇ ಆ ಮಂಪರಿನಲ್ಲೇ ಕಾದರು. ಕಿವಿ ಎತ್ತಿ ಆಲಿಸ ತೊಡಗಿದರು. ಇನ್ನೇನು...ಇನ್ನೇನು...ಉಹುಂ...ಇಲ್ಲ...ಇಂದೇನೋ ಶ್ಲೋಕ ಕೇಳಿ ಬರಲೇ ಇಲ್ಲ. ದಮಾಸೆಯಿವರು ಅತ್ತ ಇತ್ತ ಎರಡು ಸಲ ಹೊರಳಿದರು. ತಲೆಯಮೇಲೆ ದಿಂಬನ್ನಿರಿಸಿ ಒತ್ತಿಕೊಂಡರು. ನೂರು ಚಿಂತೆಗಳು ಅವರನ್ನು ಈಟಿ ಯಂತೆ ಇರಿಯುತ್ತಿದ್ದವು. ಸೊಳ್ಳೆಯಂತೆ ಜುಯ್ ಜುಯ್ ನಾದವನ್ನು ಮಾಡು ತ್ತಿದ್ದವು. ಅವೆಲ್ಲಾ ಮಾಯವಾಗಿ ನಿದ್ರಾಂಗನೆ ಆಲಂಗಿಸಲು ಕಮಲಮ್ಮನವರ ಶ್ಲೋಕದ ದಿವ್ಯ ನಾದವಷ್ಟೇ ಸಾಕು. ಆ ನಾದ ಕರ್ಣ ಸ್ಪರ್ಶಮಾಡುತ್ತಲೇ ದೊಡ್ಡಟ್ಟಿಯವರು ತಮಗರಿವಿಲ್ಲದಂತೆಯೇ ನಿದ್ರಾದೇವಿಯ ಮಡಿಲಲ್ಲಿರುತ್ತಾರೆ.

ದೊಡ್ಡಟ್ಟಿಯವರು ಮತ್ತೆ ಹೊರಳಿದರು. ಮಡದಿಯತ್ತ ತಿರುಗಿದರು. ಕಮಲಮ್ಮನವರು ಮೆಲ್ಲನೆ ಗೊರಕೆ ಹೊಡೆಯುತ್ತಿದ್ದರು. ಶ್ಲೋಕದ ಸೂಚನೆಯೇ ಇಲ್ಲ.

ದೊಡ್ಡಟ್ಟಿಯವರು ಎದ್ದು ಕುಳಿತರು. ಹನುಮ ಜಪಾನು ಆದಿಯಾಗಿ ನೂರು ವಿಷಯಗಳು ಅವರ ಮೆದುಳಿನಲ್ಲಿ ವರ್ತುಲ ವರ್ತುಲವಾಗಿ ತಿರುಗುತ್ತಿದ್ದವು. ದಮಾಸೆ ಯವರು ಕಮಲೂ" ಕಮಲೂ..." ಎಂದರು.

"ಹೂ..."

"ನಿದ್ದೆ ಬರಲಿಲ್ಲವೇ..."

"ನಿದ್ದೆ ನಿಮಗೆ ಬರಲಿಲ್ಲ!" ಎಂದು ಮುಸುಕೆಳದುಕೊಂಡರು ಕಮಲಮ್ಮ.

ದಮಾಸೆಯವರು ಹಾಸಿಗೆಯ ಮೇಲೆ ಉರುಳಿದರು. ಒಂದೆರಡು ನಿಮಿಷ ಮೌನ. ಕಣ್ಣು ಬಿಗಿಯಾಗಿ ಮುಚ್ಚಿಕೊಂಡರು.. ಇಲ್ಲ...ಉಹುಂ. ನಿದ್ರೆ ಬರಲೊಲ್ಲದು.

" ಕಮಲೂ...ಒಂದು ಸಲ ಹೇಳ್ಬಿಡು.. "

" ಇದೇನ್ರೀ ಆಗಿದೆ ನಿಮಗೆ ? ಚೆನ್ನಾಗಿ ಇವ್ರಲ್ರೀ ? ..."

" ಇಲ್ಲ ಕಮಲೂ...ನಿದ್ದೆ ಬರೊಲ್ಲ...ಒಂದೇ ಸಲ ಹೇಳ್ಬಿಡು"

" ಏನು ಹೇಳೋದು ? !"

" ಅದೇ...ರಾಮಸ್ಕಂದಂ...ನಮ್ಮ ನಾಲ್ವತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ ಒಂದು ರಾತ್ರಿಯೂ ತಪ್ಪಿಸಿಲ್ಲ...ಈವತ್ತು...ನೀನು..."

ಕಮಲಮ್ಮನವರು ಧಡೀರನೆದ್ದರು. ದವಾಸೆಯವರನ್ನು ದುರದುರನೆ ನೋಡಿದರು.

" ಏನು ಹೇಳಿದಿರಿ ? ಒಂದಿನವೂ ತಪ್ಪಿಸಿಲ್ಲವೇ ? ನಾನು ಅದನ್ನು ಒಂದಿನವೂ ಹೇಳಿಲ್ಲವಲ್ರೀ ? ಆ ಶ್ಲೋಕ ಹಿಂದೆ ನಂ ಅಜ್ಜಿ ಹೇಳ್ತಿದ್ದ ಜ್ಞಾಪಕ...ಅಷ್ಟೆ!..."

" ಇದೇನು ಹೀಗೆ ಹೇಳ್ತಿದೀಯ!...ಈ ನಾಲ್ವತ್ತು ವರ್ಷಗಳೂ ಪ್ರತಿ ರಾತ್ರಿಯೂ ನಾನು ಏನೇ ಚಿಂತೆಯಿಂದ ಬೆಂದು ಬಂದರೂ ನೀನು ಮನೆಗೆಲಸ ಮುಗಿಸಿ, ಮಲಗಿ ಈ ಶ್ಲೋಕ ಹೇಳಿದ ತಕ್ಷಣ ನನ್ನ ಚಿಂತೆಯೆಲ್ಲಾ ಮಾಯ್ವಾಗಿ ಬಿಡೋದು. ಕಮಲೂ, ಬೇಗ ಹೇಳು. ಅದು ಕಿವಿಗೆ ಬಿದ್ದರೇನೇ ನನಗೆ ನಿದ್ದೆ...."

" ನಾನು ಅದನ್ನು ಮಲಗುವಾಗ ಒಂದು ದಿನವೂ ಹೇಳಿಲ್ಲ. ಈ ನಾಲ್ವತ್ತು ವರ್ಷಗಳೂ ನೀವು ಇನ್ನೆಲ್ಲಾದರೂ ಮಲಗಿರಬೇಕಷ್ಟೆ !..."

ದೊಡ್ಡಟ್ಟಿಯವರು ದಿಗ್ಭ್ರಮೆಗೊಂಡರು. ಮೈ ಚಿವುಟಿಕೊಂಡರು. ತಾವೆಲ್ಲಿ ಮಲಗುತ್ತಿದ್ದರೆಂಬುದರಲ್ಲಿ ಅವರಿಗೂ ಕ್ಷಣಕಾಲ ಸಂಶಯ ಬಂದಿತು. ಅವರ ನಾಲ್ವತ್ತು ವರ್ಷಗಳ ದಾಂಪತ್ಯ ಜೀವನದಲ್ಲಿ ಇಂದು ಬಿರುಗಾಳಿ ಎದ್ದಿತು. ಎಲ್ಲ ಒಂದು ಪುಟ್ಟ ಶ್ಲೋಕದ ನೆಪ. ಅವಳ ಬಾಯಿಂದ ಪ್ರತಿದಿನ ನನ್ನ ಕಿವಿಯಾರ ಕೇಳಿದೀನಿ. ತಾನು ಹೇಳೇ ಇಲ್ಲಾಂತಳಲ್ಲ ! ಕೋಪದಿಂದ ದವಾಸೆಯವರ ತುಟಿಗಳು ಅದುರಿದುವು. ಸ್ವಲ್ಪ ಕಾಲ ತಡೆದು ಮತ್ತೆ ನಿದ್ದೆ ಮಾಡಲು ಪ್ರಯತ್ನ. ಮತ್ತೆ ವಿಫಲ. ಇನ್ನು ದೊಡ್ಡಟ್ಟಿಯವರು ತಡೆಯದಾದರು. ಧಿಗ್ಗನೆ ಎದ್ದು, ಕಮಲಮ್ಮನವರನ್ನು ಕುಲಕಿ ಕಿರುಚಿದರು. " ನೀನು ಹೇಳೇ ಇಲ್ಲಾಂತ ಇಟ್ಕೊಕೋ...ಮಹರಾಯ್ತಿ... ನನಗಾಗಿ ಇವತ್ತು ಹೇಳು. ನನ್ನ ನಿದ್ದೆ ಸರ್ವಸ್ವ ನಿನ್ನ ಕೈಯಲ್ಲೇ ಇದೆ ಒಂದೇ ಒಂದು ಸಲ ಹೇಳಿಬಿಡು...

ಕಮಲಮ್ಮನವರು ಸಿಡಿದೆದ್ದರು. " ಸುಮ್ಮನೆ ಮಲಗೀಂದ್ರೆ. ಹುಚ್ಚಾಟ ಆಡಬೇಡಿ. ಶ್ಲೋಕವಂತೆ. ಕೇಳ್ದೇ ಇದ್ದರೆ ನಿದ್ದೇನೇ ಬರೋಲ್ಲವಂತೆ. ಎಲ್ಲ ಬರೀ ಬೂಟಾಟಿಕೆ. " ಎಂದು ಗದರಿಸಿ, ಮುಸುಕೆಳೆದು ಮೌನರಾದರು.

ದೊಡ್ಡಟ್ಟಿ ದವಾಸೆಯವರು ನಿಶ್ಚೇತರಾಗಿ ಹಾಸಿಗೆಯ ಮೇಲೆ ಬಿದ್ದು ತಾರಸಿಯನ್ನೇ ನೋಡ ತೊಡಗಿದರು. ಇನ್ನು ಅಂದಿನ ನಿದ್ರೆ ಅವರ ಪಾಲಿಗೆ ಮುಗಿದ ಹಾಗೆಯೇ. ನಾಲ್ವತ್ತು ವರ್ಷಗಳಿಂದ ಯಾವಾಕೆಯ ಶ್ಲೋಕದ ಧ್ವನಿ ಅವರಿಗೆ ನಿದ್ರೆ ತರುತ್ತಿತ್ತೋ, ಆಕೆ ಅದನ್ನು ಖಂಡಿತ ಹೇಳಿಲ್ಲ. ಹೇಳುವುದಿಲ್ಲವೆಂದಮೇಲೆ, ಅವರಿಗಿನ್ನೆಲ್ಲಿಯ ನಿದ್ದೆ ? ಕಾವೇರಿ ಪೂರದಿಂದ ಗದ್ದೆ ಬಯಲೆಲ್ಲಾ ನೀರು ತುಂಬಿಕೊಂಡಂತೆ, ಪೈರೆಲ್ಲಾ ಕೊಳೆತು ಹೋದಂತೆ, ಭೂಮಿಯೆಲ್ಲಾ ಕ್ಷೌರವಾಗಿ, ಪೈರೆಲ್ಲಾ ಸುಟ್ಟು ಹೋದಂತೆ ..ಇನ್ನೂ ಏನೇನೋ ಭ್ರಮೆಗಳಿಂದ ತಲೆ ಗಿರ್ರನೆ ತಿರುಗುತ್ತಿತ್ತು. ಅದೀಗ ಪಕ್ಕದಲ್ಲಿ ಮಡದಿ ಕಮಲಮ್ಮನವರು ಇತ್ತ ಹೊರಳಿದರು ಕಣ್ಣುಗಳು ಮುಚ್ಚಿದ್ದವು, ಗಾಢ ನಿದ್ರೆಯಲ್ಲಿದ್ದಂತಿತ್ತು. ದವಾಸೆಯವರು ದೀಪದ ಕಿರು ಬೆಳಕಿನಲ್ಲಿ ಕಮಲಮ್ಮನವರ ಮೊಗವನ್ನು ನೋಡುತ್ತಾ, ಅವರ ನಿದ್ದೆಯನ್ನು ಕುರುಬತ್ತಿರುವಾಗಲೇ ಕಮಲಮ್ಮನವರ ತುಟಿಗಳು ಅದುರತೊಡಗಿದವು. ಮೆಲ್ಲಮೆಲ್ಲನೆ ಮೃದು ಮಧುರ ಧ್ವನಿ ಹೊರಬರತೊಡಗಿತು. ರಾಮಸ್ಕಂಧಂ ದೊಡ್ಡಟ್ಟಿಯವರಿಗೆ ಅಷ್ಟೇ ಜ್ಞಾನ. ಮತ್ತೆ ಕಣ್ಣು ಬಿಟ್ಟಾಗ ಕಮಲಮ್ಮನವರು ಬೆಡ್‌ಕಾಫಿಯನ್ನು ತಂದು ಎಬ್ಬಿಸುತ್ತಿದ್ದರು !

— ಕೊಳ್ಳೇಗಾಲದಾರಾಮಾನುಜ.

ದಿನಾವೂ ಬರಲಿ ದೀವಳಿಗೆ ಅಂತ ಹುರುಪಿನ ಅಳಿಯ ಹಾಡಿದಂತೆ ಕಾನ್‌ವೆಂಟ್ ಸಾಲೆಗಳ ವಿದ್ಯಾರ್ಥಿಗಳೆಲ್ಲಾ ಪುನಃ ಪುನಃ ಬರಲಿ ಪೋಪರು ಎಂದು ರಜಾದಲ್ಲಿ ಕುಣಿಯುತ್ತ ಹಾಡುವರಂತೆ.

* * * *

ಸೂರ್ಯೋದಯವನ್ನು ನೋಡಿದ್ದೀಯೇನಯ್ಯ ಎಲ್ಲಾದರೂ ಎಂದು ಮಾಸ್ತರು ಕಾಲೇಜು ಹುಡುಗನನ್ನು ಕೇಳಿದಾಗ.

—ನೋಡಿದೀನಿ ಮೇಷ್ಟರೇ ! ಮೊನ್ನೆ ಸಿನಿಮಾದಲ್ಲಿ ತೋರಿಸಿದರು ಅಂದನಂತೆ

* * * *

ವಿದ್ಯಾಗಣಪತಿ ಟೀಮಿಗೆ ಕ್ರಿಕೆಟ್ಟಿನಲ್ಲಿ ವಿಜಯ.

(ಸುದ್ದಿ)

—ಗಣಪತಿ ಕ್ರಿಕೆಟ್‌ನಲ್ಲಿ ಗೆಲ್ಲಬೇಕಾದರೆ ಕಡುಬು ತಿಂದು ಎದುರಾಳಿಗಳು ಬೌಲ್ ಮಾಡಿರಬೇಕು.

* * * *

ಕೇಳಿ ಕೆಟ್ಟಾಗ

"ಸಾಲ ತಗೋಬೇಡ ; ಸಾಲ ಕೊಡಬೇಡ" ಅಂಬೋದು ನಾಟಕದೊಳಗಿನ ಮಾತಾಯಿತು. ಆದರೆ ವಾಸ್ತವ ಪ್ರಪಂಚದಲ್ಲಿ ಎರವಲು ಕೊಡೋದು. ತಗೋಳ್ಳೋದು ಇಲ್ಲದೆ ನಡೆಯುವ ಹಾಗೆ ಇಲ್ಲ. ಎಂಥ ನವಾಬನಿಗಾದರೂ ಎರವಲು ತೆಗೆದುಕೊಳ್ಳುವ ಸಂದರ್ಭ ಬಂದೇಬರುತ್ತದೆ. ಆದರೆ ಮೊನ್ನೆ ನನ್ನ ಜೊತೆಗಿದ್ದ ಸ್ನೇಹಿತ ವೀರಭದ್ರು ಒಂದು ಕಡ್ಡಿಪೊಟ್ಟಣ ಎರವಲು ತೆಗೆದು ಕೊಳ್ಳೋದಕ್ಕೆ ಹೋಗಿ ಪೇಚಿಗೆ ಸಿಕ್ಕಿದ್ದು ನೋಡಿದರೆ ಎರವಲು ಕೇಳುವಾಗಲೂ ಹಿಂದೆ ಮುಂದೆ ನೋಡಿಕೊಳ್ಳದೆ ಕೇಳಬಾರದೆಂಬುದು ಖಂಡಿತವೆನಿಸಿತು.

ವೀರಭದ್ರು ಮೊನ್ನೆ ರೈಲ್ವೇಸ್ಟೇಷನ್ ರಸ್ತೆಯಲ್ಲಿ ಎರವಲು ಕೇಳಿದ್ದು ಬೆಳ್ಳಿಯಲ್ಲ ಬಂಗಾರವಲ್ಲ ಕಾಸು ಕೂಡ ಅಲ್ಲ ಕೇವಲ ಒಂದು ಕಡ್ಡೀಪೊಟ್ಟಣ ನೋಡಿ.

ನಾವು ಮದ್ರಾಸು ರೈಲಿಗೆಂದು ಹೊರಟಿದ್ದೆವು ದಾರಿಯಲ್ಲಿ ವೀರಭದ್ರುವಿಗೆ ಸಿಗರೇಟಿನ ಚಪಲವುಂಟಾಯಿತು ಸಿಗರೇಟ್ ತೆಗೆದು ತುಟಿಯಲ್ಲಿ ಸಿಕ್ಕಿಸಿಕೊಂಡು ಲೈಟರಿ ಗಾಗಿ ತಡಕಾಡಿದ. ಯಾವ ಕಿಸೆಯಲ್ಲಿಯೂ ಸಿಗಲಿಲ್ಲ. ಮನೆಯಲ್ಲಿ ಬಿಟ್ಟುಬಂದಿದ್ದನೋ ಏನೋ. ಅಷ್ಟರಲ್ಲಿ ಎದುರುಗಡೆಯಿಂದ ಒಬ್ಬ ಮಹಾಶಯರು ಒಂದು ಕೈಯಲ್ಲಿ ದೊಡ್ಡ ಚೀಲ, ಇನ್ನೊಂದರಲ್ಲಿ ಒಂದು ಬುಟ್ಟಿ ಕೊಂಕುಳಲ್ಲಿ ಕೊಡೆ, ಮೈಮೇಲೆ ಒಂದು ಭಾರೀ ಕೋಟು ಧರಿಸಿ ಬರುತ್ತಿದ್ದರು. ಈತ ಹಿಂದೆ ಮುಂದೆ ನೋಡದೆ ಕಡ್ಡಿಪಟ್ಣ ಇದೆಯೇನ್ ಸಾರ್ ಅಂತ ಕೇಳಿಯೇಬಿಟ್ಟ ನಾಚಿಕೆಯಿಲ್ಲದೆ. ಚಟಕ್ಕೆ ದಾಸರಾದವರಿಗೆ ನಾಚಿಕೆ ಗೀಚಿಕೆ ಎಲ್ಲಿ ಬಂತು !

ಹಾಗೆ ಇವನು ಕೇಳಿದನೋ ಇಲ್ಲವೋ ಆತ "ಕಡ್ಡೀ ಪೆಟ್ಟಿಗೇನೆ ? ಇಧೆ ಇಧೆ" ತಗೊಳ್ಳಿ...ಕೊಟ್ಟುಬಿಟ್ಟೆ ಎನ್ನುತ್ತಾ ಕೈಯಲ್ಲಿದ್ದ ಚೀಲವನ್ನು ಬುಟ್ಟಿಯನ್ನು ಅಲ್ಲಿಯೇ ಕುಕ್ಕಿಬಿಟ್ಟು ತಮ್ಮ ಕೋಟಿನ ಜೇಬಿನೊಳಗೆ ಕೈ ಹಾಕಿದರು.

"ನಿಮಗೆ ತೊಂದರೆ ಕೊಟ್ಟೆ" ವಿಂದು ವೀರಭದ್ರು ಕಂದಾಚಾರಕ್ಕೆ ಹೇಳಿದ ತುಟಿಯಲ್ಲಿದ್ದ ಸಿಗರೇಟನ್ನು ಮತ್ತೆ ಕೈಯಲ್ಲಿ ಹಿಡಿದುಕೊಳ್ಳುತ್ತ.

ಕಡ್ಡಿಪೊಟ್ಟಣ ಆ ಜೇಬಿನಲ್ಲಿರಲಿಲ್ಲ. ಸರಿ ಇನ್ನೊಂದು ಜೇಬಿಗೆ ಕೈ ಹಾಕಿದರು. ಆ ಜೇಬಿನಲ್ಲಿಯೂ ಇರಲಿಲ್ಲ

'ಪರವಾ ಇಲ್ಲಬಿಡಿ' ಎಂದು ನಾನು ಮುಂದುವರೆಯುವುದರಲ್ಲಿದ್ದೆ.

" ತಾಳಿ ತಾಳಿ ಕಡ್ಡೀಪೊಟ್ಟಣ ಇಲ್ಲದೇ ಇರೋದು ಸಾಧ್ಯವಿಲ್ಲ ನನ್ನ ಕೈಲಿ... ಹುಡುಕ್ತೀನಿ ತಾಳಿ ಪ್ಲಿ ಪ್ಲಿ ಪ್ಲಿ.. ನನಗೂ ಅದೇ ಚಟ...ಹುಡುಕ್ತೀನಿ ತಾಳಿ" ಎಂದು ಹುಡುಕಾಡತೊಡಗಿದರು ಅವರು.

" ನಾವು ಪರವಾಗಿಲ್ಲ ಪರವಾಗಿಲ್ಲ " ಅನ್ನೋದು...ಅವರು " ತಾಳಿ ತಾಳಿ... ಈವಾಗ ಹುಡುಕೊಡ್ತೀನಿ " ಅನ್ನೋದು ಹೀಗೆ ನಮ್ಮ ಸಂವಾದ ಸಾಗಿದ್ದಂತೆ ಆತ ಪಾಪ ಕೋಟಿನ ಒಳ ಜೇಬನ್ನು ಹುಡುಕಿ ಕೋಟನ್ನು ಕಳಚಿಕೊಡವಿ, ಷರ್ಟಿನ ಜೇಬಿನೊಳಗೂ ತಡಕಾಡಿ, ಸೊಂಟವನ್ನು ಮುಟ್ಟಿ ನೋಡುತ್ತಾ ಕಕ್ಕಾಬಿಕ್ಕಿಯಾದರು. ಅಷ್ಟರಲ್ಲಿ ನಾಲ್ಕಾರು ಮಂದಿ ದಾರಿಹೋಕರು ಏನಾಯಿತೆಂದು ವಿಚಾರಿಸಲು ನಿಂತರು ಇವರು ಕೋಟು ಕೊಡವಿದ್ದನ್ನು ನೋಡಿ ಚೇಳೇ ಹಲ್ಲಿಯೋ ಜೇಡನೆ ಎಂದು ವಿಚಾರಿಸುತ್ತಾ ಕೋಟನ್ನು ಇನ್ನೂ ಚೆನ್ನಾಗಿ ಕೊಡವಿ ಎಂದರು. ಕೋಟಿನೊಳಗಿನ ಕಡ್ಡಿ ಪೊಟ್ಟಣ ಒಂದು ಬಿಟ್ಟು ಬೇರೆಷ್ಟೋ ಸರಕು ಸರಂಜಾಮುಗಳು ಕೆಳಗೆ ಬಿದ್ದವು.

" ಅಂದ ಹಾಗೆ ಮನೆಯಿಂದ ಬರುತ್ತಾ ನಾನು ತಂದಿದ್ದ ಹಾಗೆ ಜ್ಞಾಪಕ" ಎನ್ನುತ್ತಾ ಅವರು ಕೆಳಗಿಟ್ಟಿದ್ದ ಕೈಚೀಲದಲ್ಲಿ ಹುಡುಕಾಡತೊಡಗಿದರು.

" ನಾವು ಯಥಾಪ್ರಕಾರ ಬಿಡಿ ಸ್ವಾಮಿ ಪರವಾ ಇಲ್ಲ ಅಷ್ಟು ಯಾಕೆ ತೊಂದರೆ ತೆಗೆದುಕೊಳ್ಳುತೀರಿ " ಎಂದು ತುಂಬ ಆಗ್ರಹದಿಂದ ಹೇಳಿ ಮುಂದುವರಿಯುವು ದಿರಲ್ಲಿದ್ದೇವೆ

ಆದರೆ ಆತ ಬಿಡಬೇಕಲ್ಲ ನಮ್ಮ ಕೈಹಿಡಿದು ನಿಲ್ಲಿಸುತ್ತಾ " ಛೆ ಛೇ ಹಾಗೂ ಉಂಟೆ ಸ್ವಾಮಿ ತಾವು ಕೇಳಿದ್ದೇನು ಮಹಾ ಒಂದು ಕಡ್ಡಿಪೊಟ್ಟಣ. ಅದನ್ನು ಕೊಡೋ ಯೋಗ್ಯತೆ ಇಲ್ಲದಿದ್ದರೆ ನಾನು ಬದುಕಿ ಏನು ಪ್ರಯೋಜನ ? ನಾನದನ್ನ ಹುಡುಕಿ ಕೊಟ್ಟೇ ತೀರಬೇಕು, ಎನ್ನುತ್ತಾ ಚೀಲವನ್ನು ಪೂರ್ತಿ ತಡಕಾಡಿದ್ದಲ್ಲದೆ ಬುಟ್ಟಿಯನ್ನು ತಲೆಕೆಳಕು ಮಾಡಿ ನೋಡಿದರು ಆದರೂ ಕಡ್ಡೀಪೊಟ್ಟಣದ ಪತ್ತೆಯಿಲ್ಲ.

ವೀರಭದ್ರು ಅವರ ಕೈ ಹಿಡಿದು ಕುಲುಕುತ್ತ ತುಂಬ ಥ್ಯಾಂಕ್ಸ್, ತುಂಬ ಥ್ಯಾಂಕ್ಸ್...ತಾವು ಇಷ್ಟು ತೊಂದರೆ ತೆಗೆದುಕೊಂಡಿದ್ದು ಕಡ್ಡಿಪೊಟ್ಟಣ ಕೊಟ್ಟಹಾಗೇ ಆಯಿತು...ಬರ್ತೀವೆ ನಾವು...ನಮಸ್ಕಾರ ಎಂದು ನನ್ನನ್ನು ಎಳೆದುಕೊಂಡು ಹೊರಟ

" ಇಲ್ಲ ಸ್ವಾಮಿ...ಖಂಡಿತವಾಗಿಯೂ ಬರ್ತಾ ಮನೆಯಿಂದ ತಂದಿದ್ದೆ...ಎಲ್ಲಿಗೆ ಹೋಯಿತೋ ತಿಳಿಯೋದಿಲ್ಲವಲ್ಲ ..ಹೇಗೂ ಹತ್ತು ನಿಮಿಷ ಕಾದಿದ್ದೀರಿ... ಇನ್ನೊಂದು ಐದು ನಿಮಿಷ ನನ್ನ ಕೋಟಿನೊಳಗೆ ಕಳ್ಳ ಚೀಲಗಳಿವೆ ಅವನ್ನೆಲ್ಲ ಹುಡುಕಿ ನೋಡಿಬಿಡ್ತೀನಿ. " ಎಂದು ಅಂಗಲಾಚಿದ ಆತ. ಬ್ಯಾಡಿ ಬ್ಯಾಡಿ...ಖಂಡಿತಾ ಬ್ಯಾಡಿ" ಎಂದರು ಆತ ಒಪ್ಪಬೇಕಲ್ಲ.

“ಇದು ಬಹುಶಃ ನನ್ನ ಮಗನ ಕೆಲಸ ಅಂತ ಕಾಣುತ್ತೆ ..ಶುದ್ಧ ಪೋಲಿ ಹಾರಿಸಿಬಿಟ್ಟಿದ್ದಾನೆ ಕಡ್ಡೀಪೊಟ್ಟಣ...ಮನೆಗೆ ಹೋದಕೂಡಲೆ ಬಲಿ ಹಾಕ್ತೀನಿ ಘಡಿಯನ್ನ ಎಂದು ಹಲ್ಲು ಕಚ್ಚಿ ಮತ್ತೆ “ತಾಳಿ ತಾಳಿ” ಎಂದು ಕೋಟುಕೊಡವುತ್ತಾ ಅಂಗಲಾಚಿದರು.


ರೈಲಿಗೆ ಹೊತ್ತಾಗುತ್ತಾ ಇತ್ತು. ಇನ್ನೇನು ಗತಿ ಯಾತಕ್ಕೆ ಈತನನ್ನ ಕಡ್ಡೀಪೊಟ್ಟಣ ಇದೆಯಾ ಅಂತ ಕೇಳಿದೆವು ಅಂತ ಒಳಗೊಳಗೆ ಸಂಕಟ ಪಟ್ಟೆವು. ಈತನ ಕೈಯಿಂದ ಬಿಡುಗಡೆ ಹೇಗೆ ಎಂದು ಚಿಂತಿಸುತ್ತಿರುವಾಗ ಆಗಲೇ ಅಲ್ಲಿ ನೆರೆದಿದ್ದವರ ಪೈಕಿ ಒಬ್ಬರು “ನಿಮಗೆ ಕಡ್ಡಿ ಪೆಟ್ಟಿಗೆತಾನೇ ಬೇಕಾಗಿರೋದು. ನನ್ಹತ್ರ ಇದೆ ತಗೊಳ್ಳಿ” ಅಂತ ತಮ್ಮ ಕಡ್ಡಿಪೊಟ್ಟಣ ಕೊಟ್ಟರು ವೀರ ಭದ್ರುವಿಗೆ ಜೀವ ಬಂದಂತಾಯಿತು. “ಸಿಕ್ತು ಸ್ವಾಮಿ ಸಿಕ್ತು ಕಡ್ಡೀಪೊಟ್ಟಣ ಅಂತ ಕಿರಿಚಿ ಬೇಗನೆ ಸಿಗರೇಟು ಹೊತ್ತಿಸಿಕೊಂಡ.

ಆತ ತಾಳಿ ಸ್ವಾಮಿ ತಾಳಿ ಎನ್ನುತ್ತಿದ್ದಂತೆ ನಾವು ಆತನ ಪುರಾಣ ಕೇಳಲು ನಿಲ್ಲದೆ ರೈಲ್ವೆ ಸ್ಟೇಷನಿಗೆ ಓಟ ಕಿತ್ತೆವು ಆದರೆ ರೈಲು ಹೊರಟುಹೋಗಿತ್ತು.

ಇನ್ನೊಮ್ಮೆ ಯಾರೊಡನಾದರೂ ಏನಾದರೂ ಕೇಳುವ ಮೊದಲು ಕೊಂಚ ಯೋಚಿಸೋದು ಒಳ್ಳೆಯದೆನಿಸೋದಿಲ್ಲವೆ ?

(ಸ್ಟೀಫನ್ ಲೀಕಾಕನಂತೆ)

— ರಾಮಿ.



ಬಾಗಿಲನು ತೆರೆದು ಸೇವೆಯನು ಕೊಡೊ ಕೃಷ್ಣ
ಕೂಗಿದರೂ...“ಕ್ಯೂ” ಕಾಣದೇ ??...”

★ ಮೊದಲ ರಾತ್ರಿಯ ಎರಡನೆ ಝಾಮ ★

★

ಪ್ಯಾರಿಸ್ಸಿನಲ್ಲಿ ಮೊದಲ ರಾತ್ರಿ ಅನುಭವಿಸಲು ಲೀಡೋಕ್ಕೆ ಹೋದುದನ್ನು ತಿಳಿಸಿ ಆಯಿತಲ್ಲ. ನರ್ತಕಿಯರ ಮುಖವನ್ನೇ ನೋಡುತ್ತಾ ಅಲ್ಲೇನನ್ನೂ ಕಾಣದ್ದೆ ಕಡೆಗೆ ಪಕ್ಕದಲ್ಲಿದ್ದ ಅಮೆರಿಕನ್ನನಿಂದ ಉಗಿಸಿಕೊಂಡಿದ್ದೂ ಮುಗಿಯಿತಲ್ಲ. ಅಷ್ಟು ಹೊತ್ತಿಗೆ ರಾತ್ರಿಯ ಮೊದಲ ಝಾಮ ಮುಗಿದಿತ್ತು.

ಎರಡನೇ ಝಾಮ ನಡಗರ ಸಂಭ್ರಮಗಳಿಂದ ಹುಟ್ಟಿತು. ಕಹಳೆ ಕೊಂಬುಗಳ ಎಚ್ಚರಿಕೆ ಕೇಳಿಸಿತು. ತುತ್ತೂರಿ 'ಊದಿದರು. ಆಕಾಶವಾಣಿ ಭೋರ್ಗರೆಯಿತು. ಲೀಡೋದ ರಂಗಮಂಚದ ಮುಖ ಮುಸುಕನ್ನು ಸರಿಸಿದರು.

ಸ್ಫುರದ್ರೂಪಿಯಾದ ಯುವಕನೊಬ್ಬ ಅಚ್ಚುಕಟ್ಟಾದ ಉಡುಪು ಧರಿಸಿ ನಿಂತಿದ್ದಾನೆ. ತೆರೆ ಸರಿದಮೇಲೆ ಕಿರುನಗೆಯನ್ನು ಸೂಸುತ್ತಾ ಸೊಂಟದಿಂದ ಬಾಗಿ ಪ್ರೇಕ್ಷಕರಿಗೆ ವಂದಿಸಿದ.

ಇದೇನು ಮೋಜು ? ಪ್ಯಾರಿಸ್ಸು. ನಿಶಿರಾತ್ರಿ. ಅಂತರಂಗ ಬಹಿರಂಗವಾಗುವ ಸಂಧಿಕಾಲ. ಹಣವಂತರೆಲ್ಲಾ ಹಣ ಚೆಲ್ಲಿ ಸ್ವಲ್ಪ ಹೊತ್ತಾದರೂ ಪ್ರಾಯದ ಅನುಭವ ಗಳನ್ನು ಮರುಕಳಿಸಿ ಅನುಭವಿಸಲು ಬಂದು ಕಾತುರರಾಗಿದ್ದಾರೆ. ಹಾಗಿರುವಾಗ ಅಪ್ಸರೆಯರು ಬಂದೇ ಕುಣಿಸಿ ಕುಣಿದಾಡುವುದು ನ್ಯಾಯ. ಅದರ ಬದಲು ಈ ಗಂಡು ಯುವಕ ಈ ಹೊತ್ತಿನಲ್ಲಿ ಇಲ್ಲಿ ಬಂದು ನಿಂತು ! ! ಓಹೋ. ಹಣವಂತ ಗಂಡಸರು ಮಾತ್ರ ಬರುತ್ತಾರೆ ಅಂತ ಯಾಕೆ ಅಂದುಕೊಂಡೆ ? ಡಾಲರ್ ರಾಜ್ಯದ ಶ್ರೀಮಂತ ಹೆಣ್ಣುಮಕ್ಕಳು. ಹಣ್ಣು ಹಣ್ಣು ಹೆಣ್ಣು ಮಕ್ಕಳು ಇಲ್ಲಿಗೆ ಬಂದಿರುತ್ತಾರಲ್ಲಾ ! ಅವರಿಗೆ ಮನರಂಜನೆಯಾಗಬೇಕಾದರೆ, ದೇಹ ಪುಳುಕಬೇಕಾದರೆ ಚಿಂದುಳ್ಳಿ ಹುಡುಗರು ಬರಲೇಬೇಕು. ಹೆಣ್ಣು ಹೆಣ್ಣಿನ ಕುಣಿತ ನೋಡಿ ಸುಖ ಅನುಭವಿಸು ವುದು ಸಾಧ್ಯವೇ ? ಅದಕ್ಕೆ ಈ ಯುವಕ ಮದುವೆ ಗಂಡಿನ ತರಹ ಅಣಿಯಾಗಿ ಬಂದು ನಿಂತಿದ್ದಾನೆ. ಎಂದು ಅಂದುಕೊಂಡೆ. ಅಂದಮೇಲೆ ಇದೇ ತರಹ ಹತ್ತಾರು ಹುಡುಗರು ಇನ್ನೂ ಸ್ವಲ್ಪ ಹೊತ್ತಿನಲ್ಲೇ ಧುಂಗುತ್ತಾ ಬಂದು ಯಥಾಪ್ರಕಾರ ಡ್ರಿಲ್ ಮಾಡುತ್ತಾರೆ ಎಂದು ಊಹಿಸಿದೆ.

ಅಷ್ಟರಲ್ಲೇ ರಂಗಮಂಟಪದ ಮೇಲಿನ ಯುವಕ ಎಡಗೈಯನ್ನು ಕಿರುಗಾಳಿಯಲ್ಲಿ ಬಾಳೆಲೆ ಬೀಸುಲ್ಲವೇ, ಹಾಗೆ ಬೀಸಿದ. ಬೆರಳುಗಳನ್ನು ಮೆಲ್ಲಗೆ ಮಡಿಚಿದ್ನ ಮತ್ತೆ ತೋಳನ್ನು ಎದೆಯ ಮುಂದಕ್ಕೆ ಹಾಯಿಸಿದ. ಬಲಗೈಯಿಂದ ಎಡಗೈಯನ್ನು ಭಿಕ್ಷಾಪಾತ್ರೆಯ ತರಹ ಹಿಡಿದ.

ಅರೆ ! ಅಚ್ಚ ಬಿಳಿಯ ಪಾರಿವಾಳ ರೆಕ್ಕೆ ಬಡಿಯುತ್ತಾ ಹಾರಿ ರಂಗಮಂಟಪದ ಮೇಲೆ ಹಾರಾಡಿತು.

ಆತ ತಲೆಬಾಗಿ ವಂದಿಸಿದ. ಬಲತೋಳನ್ನು ಹಾಗೆಯೇ ಹಾಯಿಸಿ ಎದೆಯ ಮುಂದೆ ತಂದು, ಭಿಕ್ಷಾಪಾತ್ರೆ ಮಾಡಿ, ಇನ್ನೊಂದು ಪಾರಿವಾಳ ಹಾರಿಸಿದ.

ಜನರೆಲ್ಲಾ ಚಪ್ಪಾಳೆ ತಟ್ಟಿದರು. ತಲೆ ಬಾಗಿ ವಂದಿಸಿದ. ಕಿರುನಗೆ ಹಾಗೇ ಇತ್ತು.

ಅಂಗಿಯ ಒಳ ಜೇಬಿಗೆ ಕೈ ಹಾಕಿದ. ಸಿಗರೇಟು ತೆಗೆಯುತ್ತಾನೋ ಎಂದುಕೊಂಡೆ. ಇಲ್ಲ. ಪಾರಿವಾಳ ತೆಗೆದ. ಹಾರಿಸಿದ. ಬಲಗಡೆ ಷರಾಯಿ ಜೇಬಿಗೆ ಕೈ ಹಾಕಿದ. ಬೆಂಕಿಪಟ್ಟಣ ಬರಲಿಲ್ಲ. ಇನ್ನೊಂದು ಪಾರಿವಾಳ ಬಂತು. ಅದೇನು ಹಸ್ತಗುಣವೊ ಅವನದು. ಎಲ್ಲಿ ಕೈ ಹಾಕಿದರೆ ಅಲ್ಲೊಂದು ಪಾರಿವಾಳ ಹಾರುತ್ತಿತ್ತು. ಸುಮಾರು ೩-೪ ನಿಮಿಷಗಳಲ್ಲಿ ಮೂವತ್ತು ನಲವತ್ತು ಪಾರಿವಾಳ ಹಾರಾಡ ಹತ್ತಿದುವು.

ಸಣ್ಣಪುಟ್ಟ ವೃಕ್ಷಗಳೆಲ್ಲವೂ, ಪಾರಿವಾಳಗಳು ಹಾರಿದಾಗ ಇವನ ಮೇಲೆ ಬಿದ್ದಿದ್ದುವು. ನಮ್ಮೂರಿನಲ್ಲಿ ಪಾರಿವಾಳಮೇಲೆ ಹಾರಿ ಹೋದರೆ ಟೋಪಿ ಅಂಗೀನ ಒಗೆಯುಕ್ಕೆ ಹಾಕಬೇಕಾಗುತ್ತೆ. ಅಲ್ಲಿ ಹಾಗಾಗಲಿಲ್ಲ. ಏಕೆಂದರೆ ರಂಗಮಂಟಪದ ಕಂಚುಕಿ ಒಂದು ನವಿರಾದ, ಹಗುರಾದ ರೇಷ್ಮೆಯಿಂದ ಮಾಡಲ್ಪಟ್ಟಿದ್ದ ಕಸಪರಿಕೆಯಿಂದ ಆತನ ಅಂಗಿ ಷರಾಯಿಗಳನ್ನು ಗುಡಿಸಿದ.

ಇದೇರೀತಿ ಹತ್ತು ನಿಮಿಷ ಇಂದ್ರಜಾಲ ಮಹೇಂದ್ರಜಾಲದ ಆಟಗಳನ್ನು ಆಡಿ ತೋರಿಸಿದ. ಒಂದು ಮಾತಿಲ್ಲ. ಒಂದು ಅವಸರ ಇಲ್ಲ. ಹೂವಿನಸರ ಎತ್ತಿದ ಹಾಗೆ ಜಾದೂ ಮಾಡಿದ.

ಕೈ ಬೀಸಿ ಗಾಳೀನ ಮುಷ್ಟೀಲಿ ಹಿಡಿದು, ಮುಷ್ಟಿ ಬಿಚ್ಚಿ ಪಾರಿವಾಳ, ಉಂಗುರ, ತಟ್ಟೆ ಬಟ್ಟಲು, ತೋರಿಸಿದ ಈತ ನಮ್ಮೂರಿಗೆ ಬಂದಿದ್ದರೆ. ಸುಖವಾಗಿ ಶಿಷ್ಯರನ್ನು ಸಂಪಾದಿಸಿಕೊಂಡು ಅರಸು ಜೀವನ ನಡೆಸಬಹುದಲ್ಲ ! ಎಂದು ಅಂದುಕೊಂಡೆ.

ಜಾದೂಗಾರನ ನಿಷ್ಕ್ರಮಣ. ಆಮೇಲೆ ರಂಗಮಂಟಪವೇ ಎರಡು ಅಡಿ ಮೇಲಕ್ಕೆದ್ದಿತು. ನೋಡಿದರೆ ಎರಡು ಅಡಿ ದಪ್ಪಗಿರುವ ಮಂಜಿನ ಗಡ್ಡೆಯ ದೊಡ್ಡ ಚಪ್ಪಡಿ ಅದು. ಇದೇನು ? ಮಂಜುಗಡ್ಡೆ ರಂಗದಮೇಲೆ ಗಿರಿಜಾ ಕಲ್ಯಾಣ

ಆಡುತ್ತಾಯೇ ಎನ್ನಿಸಿತು ಮನಸ್ಸು. ಹುಚ್ಚು ಹಾರುವ ಮುನ್ನ ಒಂದು ಗಂಡು ಒಂದು ಹೆಣ್ಣು ಹರಿದು ಬಂದು ನಿಂತುವು. ಪಾದಗಳಿಗೆ ಸ್ಕೇಟ್ಸ್ ಕಟ್ಟಿಕೊಂಡು ಮಂಜು ಗಡ್ಡೆಯಮೇಲೆ ಅವರು ಜಾರಿ ಬಂದಾಗ, ನಾಲ್ಕು ಕಾಲುಗಳು ನಿಮಿರಿ ನಿಂತಿದ್ದುವು. ಆದರೂ ರಭಸದಿಂದ ಅವರು ಬಂದಿದನ್ನು ನೋಡಿದರೆ ಸ್ಕೂಟರಿನಲ್ಲೂ ಈ ವೇಗ ಅಸಾಧ್ಯ ಎನ್ನುವಂತಿತ್ತು.

ಹರಿದುಬಂದು ಇಬ್ಬರೂ ಒಂದು ಕ್ಷಣ ರಂಗಸ್ಥಳದಲ್ಲಿ ನಿಂತರು. ದಂಪತಿಗಳು ಕೈ ಹಿಡಿದುಕೊಂಡು ನಿಲ್ಲುಲ್ಲವೇ ? ಅರುಂಧತಿ ನಕ್ಷತ್ರ ನೋಡುಕ್ಕೆ. ಹಾಗೆ ನಿಂತರು. ನಮ್ಮನ್ನೆಲ್ಲಾ ನೋಡಿದರು, ವಿನಿಮಯಕ್ಕಾಗಿ ನಾನೂ ಅವರನ್ನು ನೋಡಿದೆ.

ಅಳತೆ ತೆಗೆದುಕೊಳ್ಳದೆ ಷರಾಯಿ ಹೊಲಿಸಿಬಿಟ್ಟರು ಅನ್ನಿ. ಅದೇ ತರಹ ಮುಚ್ಚಂಗಿಯನ್ನೂ ಹೊಲಿಸಿದರು ಅನ್ನಿ. ಆಮೇಲೆ ಉಡುಪುಗಳನ್ನೂ ದೋಭೀಗೆ ಹಾಕಿದರು ಅನ್ನಿ. ಹೊಲಿಸಿದ ಬಟ್ಟೆ ಸಾನ್‌ಫೋರೈಸ್ಡ್ ಅಲ್ಲ ಅನ್ನಿ ಮಡಿ ಉಡುಪು ದೋಬಿಯಿಂದ ಬಂದಮೇಲೆ ಒಂದು ಷರಾಯಿ ಒಂದು ಮುಚ್ಚಂಗಿಯಲ್ಲಿ ಒಬ್ಬನನ್ನು ಎರಕ ಹೊಯ್ದು ಹಾಗೆ ತೂರಿಸುಕ್ಕೆ ಸಾಧ್ಯವಾಯಿತು ಅನ್ನಿ. ಅದೇ ತರಹ ಇನ್ನೊಂದು ಷರಾಯಿ ಮುಚ್ಚಂಗಿಯೊಳಕ್ಕೆ ಒಂದು ಹೆಣ್ಣನ್ನು ಹುಯ್ದರು ಅನ್ನಿ ಅಲ್ಲಿ ಇಲ್ಲಿ ಅದುಮಿ ಅಮುಕಿ ಉಡುಪಿನೊಳಕ್ಕೆ ತುಂಬಿದರು ಅನ್ನಿ. ಉಡುಪು ಧರಿಸಿದ ಗಂಡು ಹೆಣ್ಣು ಎದ್ದು ನಿಂತರೆ ಎಲ್ಲೆಲ್ಲಿ ಬಟ್ಟೆ ಹರಿದುಹೋಗಿ ಏನೇನು ಅನಾಹುತ ಆಗಿಬಿಡುತ್ತೋ ಅಂತ ಹೆದರಿಕೆ ಆಗುಲ್ಲವೇ ? ಆ ರೀತಿ ಸ್ಕೇಟರ್ ಹೆಣ್ಣು ಉಡುಪು ಧರಿಸಿದ್ದಳು. ಚರ್ಮದಮೇಲೆ ಬಟ್ಟೆಯ ಚರ್ಮ ಇದ್ದಂತೆ ಕಂಡಿತು. ಮೇಲೆ ಹಾಲು ಹಾಕದೆ ಮೂರು ಮಕ್ಕಳನ್ನೂ ಸಾಕಿ ಬೆಳೆಸಿರಬಹುದು ಎನ್ನಿಸಿತು. ಸ್ಕೇಟರ್ ಹುಡುಗ ನದೋ ಮಗುವಿನ ಮುಖ, ಹಸುಗೂಸಿನ ನಿರ್ಮಲ ಮುಖ. ಸಾಕ್ಷಾತ್ ಪುಟ್ಟ ಗೊಮ್ಮಟನಂತೆಯೇ ಕಂಡ.

ಮಂಜುಗಡ್ಡೆಯ ಚಪ್ಪಡಿಯಮೇಲೆ ಇಬ್ಬರೂ ಅಪ್ಪಾಲೆ ತಿಪ್ಪಾಲೆ ಆಡುಕ್ಕೆ ಶುರು ಮಾಡಿದರು, ಮೊದಲು ಮಂದ್ರಸ್ಥಾಯಿಯಲ್ಲಿ ಆಟವಾಡಿದರು.

ಅ ಪ್ಪಾ ಲೇ   ತಿ ಪ್ಪಾ ಲೆ
ಹೊ ರ ಮ ನೆ ಯೆ ಲ್ಲಾ   ಕ ತ್ತಾ ಲೆ
ಅ ಪ್ಪಾ ಲೇ   ತಿ ಪ್ಪಾ ಲೇ
ಬಿ ರಿ ಮ ನ ಸೆ ಲ್ಲಾ   ಬೆ ತ್ತಾ ಲೇ

ಸುರಳಿ ಸುರಳಿ ಹರಿದಾಡಿದರು. ಎದುರು ಬದುರು ಬಳುಕಾಡಿದರು. ಜೋಡಿ ಜೋಡಿ ಹಾವುಗಳಂತೆ ಸರಿದಾಡಿದರು,

ಅಪ್ಪಾಲೆ   ತಿಪ್ಪಾಲೆ
ಅಂಗೈ ಮುಂಗೈ   ಚಪ್ಪಾಳೆ
ಅಪ್ಪಾಲೆ   ತಿಪ್ಪಾಲೆ
ಹಿಂಗೈ ಮುಂಗೈ   ಚಪ್ಪಾಳೆ

ಅಂತ ಚಪ್ಪಾಳೆ ಹಾಕುತ್ತಾ ಕುಣಿದಾಡಿದರು.

ಆಮೇಲೆ ಎರಡನೆ ಕಾಲದಲ್ಲಿ ಕುಣಿದಾಡಿದರು.

ಅಪ್ಪಾಲೇ ತಿಪ್ಪಾಲೇ ಹೊರಮನೆಯೆಲ್ಲಾ ಕತ್ತಾಲೆ
ಅಪ್ಪಾಲೇ ತಿಪ್ಪಾಲೇ ಒಳಮನಸೆಲ್ಲಾ ಬೆತ್ತಾಲೆ.

ಮೂರನೇ ಕಾಲದಲ್ಲಿ ಕುಣಿದಾಡುಕ್ಕೆ ಶುರುಮಾಡಿದಾಗ, ಆಕೆಯ ಬಲಗಾಲು ತೊಡೆ ಎಲ್ಲವೂ ನೆಲದ ಮೇಲೆ ಬಿದ್ದಂತಾದಾಗ, ಹಿಂದುಗಡೆಗೆ ಎಡಗಾಲು ತೊಡೆ ಬಿದ್ದಂತೆ ಕಾಣಿಸಿತು. ಅಪ್ಪಾ ಹರಿದು ಹೋಗುತ್ತಲ್ಲಾ ಎಂದು ಚಕಿತನಾಗುವ ಹೊತ್ತಿಗೆ, ಆಕಿ ಕತ್ತರಿ ತರಹ ಕಾಲುಗಳನ್ನು ಸೆಳೆದುಕೊಂಡು ಜಿಂಕೆಯಂತೆ ನಿಂತು ಕಣ್ಣು ಹೊಳಪಿಸುತ್ತಿದ್ದಳು. ಆಗ ನನಗೆ ಅರ್ಥವಾಯಿತು. ಇವರು ಬಟ್ಟೆ ಉಡು ಪೆಲ್ಲಾ ಹಾಕಿಕೊಂಡಿರುವುದು, ರಬ್ಬರಿನ ಉಡುಪಿರಬೇಕು ಅಂತ.

ಆತ ಏನು ಮಾಡಿದ ಅಂತ ? ಒಂದು ಸುತ್ತು ಸುರುಳಿ ಸುತ್ತಿದ, ಇವಳ ಕೈ ಹಿಡಿದುಕೊಂಡು. ಆ ಮೇಲೆ ಪಥಾತ್ತನೆ ಆವಳನ್ನು ಹಾರಿಸಿಯೇ ಬಿಟ್ಟ. ಕವಣೆ ಕಲ್ಲು ಹೊಡೆಯುಕ್ಕೆ ನಾವು ಸುತ್ತಿಸುವುದಿಲ್ಲವೇ ಹಾಗೆ ಆಕೀನ ತನ್ನ ಸುತ್ತಲೂ ಮೂರು ಬಾರಿ ಗಾಳಿಯಲ್ಲಿ ಸುತ್ತಿಸಿಯೆ ಬಿಟ್ಟ. ಆ ಮೇಲೆ ಪಗೂರಾಗಿ ಇಳಿಸಿದಾಗ ಆಕೆಗೆ ತಲೆ ಚಕ್ಕರ್ ಬಂದಿರುತ್ತೇನೋ ಎಂದುಕೊಂಡಿದ್ದೆ. ಇಲ್ಲ. ತಲೆಯ ಬದಲು ಸೊಂಟಕ್ಕೆ ಬಂದಿತ್ತು ಚಕ್ಕರ್. ನಿಂತಲ್ಲೇ ಆಕೆ ಮೂರು ಸುತ್ತು ಸೊಂಟವನ್ನು ಸುತ್ತಿಸಿದಳು. ನಂತರ ಪರಿದಾಡಿದಳು.

ಜನರೆಲ್ಲಾ ಚಪ್ಪಾಳೆ ತಟ್ಟಿ ತಮ್ಮ ಮೆಚ್ಚಿಗೆಯನ್ನು ಸೂಸಿದಾಗ, ಸ್ಕೇಟರ್ ಜತೆಯು ಮುಕ್ತಾಯವನ್ನು ನುಡಿಸಿತು ಎಂದು ಗೊತ್ತಾಯಿತು.

ಅದಾದ ಮೇಲೆ ರಂಗಸ್ಥಳವನ್ನು ಮುಂದಿನ ಕಾರ್ಯಕ್ರಮಕ್ಕೆ ಸಿದ್ಧಪಡಿಸುವುದ ಕ್ಕಾಗಿ ಹೊರ ತೆರೆಯನ್ನು ಇಳಿಸಿದರು.

ರಂಗಸ್ಥಳದ ಮುಂದೆ ಎಂಟು ಹತ್ತು ಅಡಿ ಅಗಲ. ಹತ್ತು ಹನ್ನೆರಡು ಅಡಿ ಉದ್ದದ ಜಾಗ ಖಾಲಿಯಾಯಿತು. ಬ್ಯಾಂಡ್ ಬಾರಿಸುತ್ತಿತ್ತು. ಕುಣಿದವರನ್ನು ನೋಡಿದ ಮೇಲೆ ಕಂಡವರು ಸುಮ್ಮಗೆ ಕೂರುಕ್ಕಾಗುತ್ತ್ಯೇ ?

ಪ್ರೇಕ್ಷಕರು ಜತೆ ಹೊಂದಿಸಿಕೊಂಡು ಆ ಕಿಷ್ಕಿಂಧೆಯಲ್ಲೇ ಕುಣಿಯುಕ್ಕೆ ಆರಂಭಿ ಸಿದರು. ೬೦ ರ ಹೋತ ಹದಿನಾರರ ಹರಿಣಿ ಜತೆ, ೫೦ ಮುದುಕಿ ೧೭ ರ ಅಭಿಮನ್ಯು ಜತೆ, ೫ ಅಡಿ ಎತ್ತರದ ಗರುಡಿಯಾಳು ಆರಡಿ ಎತ್ತರದ ಕನ್ಯೆಯೊಡನೆ, ೬ ಅಡಿ ಸೈಂಧವ ೪ ಅಡಿಯ ಕಂಚಿಕಡಸಿನ ಜತೆ, ಹೀಗೆ ೨೦-೩೦ ಜತೆಗಳು ಕುಣಿಯುಕ್ಕೆ ಆರಂಭಿಸಿದುವು. ಎಂಟು ಜನ ಕೂಡ್ರುವ ರೈಲು ಗಾಡಿಯಲ್ಲಿ ಹದಿನೆಂಟು ಜನ ಸಾಮಾನು ಜತೆ ಕೂಡುವುವಿಲ್ಲವೇ ಹಾಗೆ ಎಂಟು ಜತೆ ನಿಲ್ಲಬಹುದಾದ ಸ್ಥಳದಲ್ಲಿ ಇಪ್ಪತ್ತೆಂಟು ಜತೆ ನರ್ತನಕ್ಕೆ ನಿಂತಿದ್ದುವು.

ಮುಂದೆ ಹೆಜ್ಜೆಯಿಟ್ಟರೆ ಒಂದು ಜೋಡಿ, ಹಿಂದೆ ಹೆಜ್ಜೆ ಸರಿದರೆ ಅಲ್ಲೊಂದು ಹಿಂದೆ. ವಾಲಿದರೆ ಪಕ್ಕಕ್ಕೆ ಅಲ್ಲೊಂದು ಜತೆಯ ಪಕ್ಕೆ ಹೀಗಿದ್ದರೂ ನಿಂತಲ್ಲೇ ಕುಲುಕುತ್ತ ನಕ್ಕು ಸಂತೋಷ ಪಡುತ್ತಿದ್ದರು.

ರಂಗಮಂಟಪದ ಸಿದ್ಧತೆ ಆಯಿತು. ಹೊರ ತೆರೆಯ ಅನಾವರಣ ಆಯಿತು ಮೂವತ್ತು ಅಡಿ ಉದ್ದ. ಹತ್ತು ಅಡಿ ಅಗಲ. ೮-೧೦ ಅಡಿ ಆಳದ ಗಾಜಿನ ಕೊಳ ವೊಂದನ್ನು ರಂಗಮಂಟಪದ ಮೇಲೆ ತಂದರು. ಅದರಲ್ಲಿ ಧಡೂತಿ ನೀರು ಸಿಂಹ ಆಡುತ್ತಿತ್ತು. ಅದರ ಮಾಲೀಕ ಯಥಾಪ್ರಕಾರ ಪಾಶ್ಚಾತ್ಯ ಮದುವೆಗಂಡಿನ ಉಡುಪು ಧರಿಸಿ ನೀರು ಸಿಂಹದ ಕೈಲಿ ರಾಗಮಾಲಿಕೆ ಬಾರಿಸಿಸುವುದು, ಮೂಗಿನ ಮೇಲೆ ಚೆಂಡನ್ನು ಬೀಳಿಸದಂತೆ ಇರಿಸಿಕೊಳ್ಳುವುದು. ಈಜಾಡುವುದರ ಹಲವು ವಿಧಾನ ಗಳನ್ನು ತೋರಿಸುವುದು ಇವೆಲ್ಲವನ್ನು ಮಾಡಿಸಿದ.

ನೀರಿನಲ್ಲಿ ಆಟ ತೋರಿಸಿದಮೇಲೆ ನೀರುಸಿಂಹವನ್ನು ಹೊರಕ್ಕೆ ಬರಿಸಿ, ಅದರ ಮುಖಕ್ಕೆ ಮುತ್ತಿಟ್ಟ. ಅದು ಮುಖ ಕೊಡವಿಕೊಂಡು ಜುಗುಪ್ಸೆ ತೋರಿಸಿದಾಗ, ನವ ತರುಣಿಯೊಬ್ಬಳು ಬಂದಳು ಅದರ ಬಾಯಿಗೆ ತನ್ನ ಬಾಯಿಟ್ಟು ಮುತ್ತಿಟ್ಟಳು. ಆಗ ಈ ನೀರು ಸಿಂಹ ಉಪ್ಪಿನಕಾಯಿ ರುಚಿ ಕಂಡವರಂತೆ ಚಪ್ಪರಿಸಿತು,

ಪಕ್ಕದಲ್ಲಿ ಕೂಡ ಯಾರೋ ಚಪ್ಪರಿಸಿದಂತಾಯಿತು. ತಿರುಗಿನೋಡಿದರೆ, ಮುಪ್ಪಿನ ಅಮೆರಿಕನ್ ದಂಪತಿಗಳು, ಕೈ ತಕದಂತಾವಳಿಗಳ ಸಹಾಯದಿಂದಲೇ ಮುತ್ತಿಟ್ಟುಕೊಳ್ಳುತ್ತಿದ್ದರು ನೀರು ಸಿಂಹದಿಂದ ಗ್ರಾಮ ಸಿಂಹದ ತನಕ ಮುತ್ತಿಡುವುದು ಸಾಂಕ್ರಾಮಿಕ ಜಾಡ್ಯ, ಒಬ್ಬರಿಂದ ಒಬ್ಬರಿಗೆ ಹರಡುತ್ತೆ ಎಂಬ ಪಾಠವನ್ನು ಕಲಿತೆ.

ಒಂದಡಿ ಉದ್ದ ೪ ಅಂಗುಲದಪ್ಪ ಇದ್ದ ಜೀವಂತ ಮೀನನ್ನು ಮಾಲಿಕ ನೀರು ಸಿಂಹಕ್ಕೆ ಬಹುಮಾನವಾಗಿ ಎಸೆದ. ಗಾಳಿಯಲ್ಲೇ ಬಾಯಲ್ಲಿ ಹಿಡಿದು ಆ ದರಿದ್ರ ಮುಂಡೇದು ಅನಾಮತ್ತು ನುಂಗೇ ಬಿಡೋದೇ.

ನರ್ತಕಿಯರು ಮೊದಲು ಬಂದು ನರ್ತನ ಮಾಡಿದಾಗ, ಹಾವ ಭಾವಗಳನ್ನು ನೋಡಲು ಮುಖವನ್ನೇ ನೋಡಿ ಪೆಚ್ಚಾದಾಗಿನಿಂದ, ಇನ್ನೊಂದು ಅವಕಾಶ ಬಂದರೆ ಸದುಪಯೋಗ ಮಾಡಿಕೊಳ್ಳಬೇಕು ಎಂದು ತೀರ್ಮಾನಿಸಿದ್ದೆ. ಆದರೆ ಜಾದೂಗಾರ ಸ್ಕೇಟಿಂಗ್ ಜತೆಗಳು, ನೀರು ಸಿಂಹದ ಮೋಜು ಇವನ್ನೇ ಕಂಡಿದ್ದೆ. ಮುಂದೇನು ಮಂಗಳ ಹಾಡಿಬಿಡುತ್ತಾರೇನೋ ಎಂದು ಹೆದರಿದೆ.

ಹೊರ ತೆರೆಯನ್ನೆತ್ತಿದಾಗ ಝುಗಿ ಝುಗಿ ಝುಗಿಯುತ್ತಾ ಒಬ್ಬಾಕೆ ನೆಟ್ಟಗೆ ಓಡಿಬಂದಳು. ಬಲು ತೆಳ್ಳಗಿದ್ದ ಹಸಿರು ಬಣ್ಣದ ಹೊಳೆಯುವ ಮೇಲ್ ಥಾವಣಿ ಯನ್ನು ಹೊದ್ದುಕೊಂಡಿದ್ದಳು. ರಂಗ ಮಂಟಪದ ಮುಂದೆ ಮುಂದಕ್ಕೆ ಬಂದಳು. ಯಾರೋ ಪಾಪ! ಬಳಲಿದ ಬಾಣಂತಿ, ತೊಟ್ಟಿಲಲ್ಲಿ ಮಗುವು ಅಳುತ್ತಿದೆ ಎಂದು ಬಚ್ಚಲ ಮನೆಯಿಂದ ಮೈಯನ್ನೂ ಒರೆಸಿಕೊಳ್ಳದೆ ಓಡಿ ಬರುತ್ತಿದ್ದ ಹಾಗೆ ಇತ್ತು. ಬಂದಳು ಮೇಲು ಥಾವಣಿಯನ್ನು ತೆಗೆದು ಎಸೆದಳು. ಕುಣಿದಾಡಿದಳು. ಎಳೆ

ಮಗುವು ಯಾವಾಗ ಅಳುತ್ತೊ. ಅದರ ಹಸಿವನ್ನು ಪೂರೈಸಲು ಸಿದ್ಧವಾಗಿರಬೇಕು ಎಂದು ಆಕೆ ಪೂರ್ವ ಸಿದ್ಧತೆಯನ್ನು ಪೂರ್ಣವಾಗಿ ಮಾಡಿಕೊಂಡಂತಿತ್ತು. ಸತಿ ಅನುಸೂಯ ತರಹ.

ಈಕೆಯ ಬಾಣಂತಿ ಕುಣಿತ ಮುಗಿಯುವ ಹೊತ್ತಿಗೆ ಹಿಂದಿನಿಂದ ಒಂದು ದಂಡೇ ರಂಗಮಂಟಪದ ಮೇಲಕ್ಕೆ ಜಿಗಿಯುತ್ತಾ ಬಂತು. ಹೆಣ್ಣುಗಳ ದಂಡು. ವಸ್ತ್ರಾಪಹರಣಮಾಡಿ ಮರದ ಮೇಲೆ ಹತ್ತಿ ಕೂತಿರುವ ಕೃಷ್ಣ; ನದಿಯಿಂದ ಸ್ನಾನ ಮಾಡಿ ಬಂದ ಗೋಪಿಕಾಸ್ತ್ರೀಯರು, ಈ ದೃಶ್ಯದ ಚಿತ್ರವನ್ನು ನೋಡಿದ್ದೀರಲ್ಲಾ. ಅದೇ ತರಹಾ ಇತ್ತು ಈ ಹೆಣ್ಣು ದಂಡು. ಲೀಡೋದವರು ಇನ್ನೂ ದ್ವಾಪರ ಯುಗದಲ್ಲೇ ಇದ್ದಾರೆ. ನಾವು ಮುಂದುವರೆದು ಕಲಿಯುಗಕ್ಕೆ ಬಂದಿದ್ದೇವೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರಕಿದುವು. ಸ್ರೀ ಕೃಷ್ಣ ಪರಮಾತ್ಮ ಲೀಡೋದಲ್ಲೇ ಇರಲಿ. ನಮ್ಮೂರಿಗೆ ಬರದೇ ಇರಲಿ ಎಂದು ಹರಕೆ ಹೊತ್ತೆ. ಯಾಕೆ ಗೊತ್ತೆ ? ಅಲ್ಲಿದ್ದ ಅನುಭವಿಗಳೊಬ್ಬರು ಹೇಳಿದರು; ಲೀಡೋದಲ್ಲಿ ಕಂಡಿದ್ದೆ. ಮುಂದೆ ನಾಡಿನಲ್ಲಿ ಫ್ಯಾಶನ್ ಆಗುತ್ತೆ ಅಂತ. ಒಂದು ಗ್ರಹಣದ ದಿವಸ ಅಥವಾ ಮಳೆ ತುಂಬಾ ಬಂದ ದಿವಸ ಈ ನೋಟವನ್ನು ತಡಕೊಳ್ಳಬಹುದು. ದಿನ ಬೆಳಗಾದರೆ ಇದೇ ಕಂಡರೆ ಕಾಡಿಗೆ ಹೋಗೋದೇ ಕ್ಷೇಮ. ಅಥವಾ ಮೀಸೆ ಗಡ್ಡ ಬೆಳೆಸಿ ಋಷಿಗಳಾಗಲೇ ಬೇಕು.

ಎರಡನೆ ಋಾಮದ ಆಟ ಮುಗಿದಮೇಲೆ ಎಲ್ಲರೂ ಹೊರಬಿದ್ದರು. ಜತೆಯಗರೊಡನೆ ಕೂಡಿಕೊಂಡು ಹಿಂತಿರುಗುವಾಗ ಹೇಳಿದೆ " ಯಾಕೋ ? ಹಸಿವಾಗ್ತಾ ಇದೆಯಲ್ಲ. ಇಲ್ಲೇನಾದರೂ ಪಾನಿ ಪೂರಿ ಅಥವಾ ಬೇಲ್ ಪೂರಿ ರಸ್ತೆ ಅಂಚಿನಲ್ಲಿ ಸಿಗಬಹುದೇ ಎಂದೆ. ಆ ಚುರುಕು ದೃಶ್ಯಗಳನ್ನು ನೋಡಿದಮೇಲೆ ಹೊಟ್ಟೆಗೆ ಬೆಂಕಿ ಹಾಕಿದ ಹಾಗಾಯ್ತು. ನನಗೂ ಹಸಿವು ಎಂದ ಒಬ್ಬ ಗೆಳೆಯ. " ನೃತ್ಯ ನೋಡ್ತಾ ಇದ್ದಾಗ ತಾಳ ಹಾಕ್ತಾ ಇದ್ದ ಹಾಗಿತ್ತು. ಹೊರಗೆ ಬಂದಮೇಲೆ ಕೂಡ ತಾಳ ಹಾಕ್ತಾನೇ ಇತ್ತು. ಲೀಡೋದ ಘಂ ಘಂ ನೆನಪಿರಬಹುದು ಎಂದುಕೊಂಡಿದ್ದೆ. ನೀವು ಹೇಳಿದಮೇಲೆ ಈಗ ಅರ್ಥವಾಗ್ತಾ ಇದೆ. ತಾಳ ಹಾಕ್ತಾ ಇರೋದು ನನ್ನ ಹೊಟ್ಟೆ ಅಂತ ಇನ್ನೊಬ್ಬ ಹೇಳಿದ.

ಮಗುದೊಬ್ಬ ಎಚ್ಚರಿಕೆ ಕೊಟ್ಟ. ಈ ಅವೇಳೆಯಲ್ಲಿ ಹೋಟಲಿಗೆ ಹೋಗೋದು ಬರೀ ಹೊಟ್ಟೆ ಹಸಿವಿಗಲ್ಲ. ದ್ವಾಪರ ಯುಗದ ಯಾದವನಾಟವನ್ನು ಆಡುವ ಮೊದಲು ಚಕ್ಕಂದದ ತಿನ್ನುಕ್ಕೆ. ಬೇರಮುನೆ ತಿಂಡಿಗಳ ತರಹ. ಹೋದಗೀದರೆ ಕುಚೇಲ ಕೃಷ್ಣನನ್ನು ನೋಡುವುದಕ್ಕೆ ಹೋಗುವ ಮುಂಚೆ ಇದ್ದಹಾಗೆ ಆಗಿಬಿಡ್ತೀರಿ. ತೆಪ್ಪನೆ ನಮ್ಮ ಹೋಟಲಿಗೆ ಹೋಗೋಣ ಅಂದ. ಹ್ಞೂ ಅಂದೆವು.

ಬೆಳಿಗ್ಗೆ ಎದ್ದು ಕರಾಗ್ರೆ ವಸತೆ ಲಕ್ಷ್ಮಿ ಎಂದು ಕಣ್ಣುಜ್ಜಿಕೊಂಡಾಗ ಗಡಿಯಾರ ಒಂಭತ್ತು ತಾಸನ್ನು ತೋರಿಸುತ್ತಿತ್ತು.

ಕೊರವಂಜಿ

ಕೆಂಪೇಗೌಡ ಸರ್ಕಲ್, ಬೆಂಗಳೂರು-೯

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು, ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ಮಿಕ್ಕ ವಿಚಾರಗಳನ್ನು ವ್ಯವಸ್ಥಾಪಕರಲ್ಲೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩-೦೦
ಬಿಡಿ ಪ್ರತಿ ಕೇವಲ ೨೫ ಪೈಸೆ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೇ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು. ಹಾಗೆ ಬದಲಾವಣೆಯಾದ ವಿಳಾಸವನ್ನು ತಿಳಿಸುವಾಗ ತಮ್ಮ ಚಂದಾ ಸಂಖ್ಯೆಯನ್ನೂ ತಿಳಿಸಬೇಕಾಗಿ ವಿನಂತಿ.

NEWS AGENTS

1. M/s JAI HIND TRADING CORPORATION
   Park View, KOLAR
2. Shri GOPAL DOSS
   104, M. G. Road, POONA-1
3. M/s BHARATH STORES
   4/69, W. E. A. Krishna Market
   Karolbagh, NEW DELHI-5

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Printed by B. S. Iyengar, Bangalore-2
Publisher—B. N. Gupta Editor—M. Shivaram